ಶ್ರೀ ಡಿ ದೇವರಾಜ ಅರಸ್.—ಈಗ ತಮಾಷೆಗೆ ಕಾಲಾವಕಾಶವಿಲ್ಲ. ಹಾಸ್ಯ ಮಾಡುವವರ ಪಾತ್ರವನ್ನು ಇಲ್ಲ ವಹಿಸುವುದಕ್ಕಾಗುವುದಿಲ್ಲ.

I would request you to carefully hear when I am reading his letter He says

"The reasons given by you, as reported in the press for not disclosing the grounds on which I declined to mention to you the names of Ministers is that I have marked my letter as "Secret."

Please listen to this portion

"If I consent to your reading the entire correspondence that passed between us, as also my letter referred to above addressed to the Union Minister for Law, Justice and Company Affairs, will you assure me that you will read out all the letters referred to above on the floor of both the Houses of the Legislature and also release them to the Press so that the people may judge for themselves."

He has stated "If I consent". That is why I hesitated. Now I also said I complimented and thanked the leader of the oppoistion for the suggestion and immediately I asked the Chief Secretary to get the consent. Now I have obtained the consent I started reading this.

SRI H. D. DEVE GOWDA.—What appeared in the Press has been doubted by the Hon'ble Minister for Health.

SRI KONANDUR LINGAPPA.—After all, he is the Minister for Health. You must consider it.

SRI M. S KRISHNAN.—The Health Minister thought that he could divert the attention of the entire House but he failed.

KARNATAKA LAND REFORMS (AMENDMENT) BILL, 1977

MESSAGE FROM THE GOVERNOR

MADAM SPEAKER.—I have received the recommendation of the Governor for the consideration of the Karnataka Land Reforms (Amendment) Bill, 1977

Motion to consider

SRI N. HUTCHAMASTHY GOWDA (Minister for Revenue).—Madam Speaker, I beg to move:

"That the Karnataka Land Reforms (Amendment) Bill, 1977 be taken into consideration."

MADAM SPEAKER.—Motion moved

"That the Karnataka Land Reforms (Amendment) Bill, 1977 be taken into consideration."

†ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಅಧ್ಯಕ್ಷರೇ, ಭೂಸುಧಾರಣಾ ಕಾಯ್ದೆಗೆ ಅವಸರದಲ್ಲಿ ಕೆಲವು ತಿದ್ದುಪಡಿಗಳನ್ನು ತರಬೇಕಾಗಿತ್ತು. 31 ನೇ ಡಿಸೆಂಬರ್ 1976 ರವರೆಗೆ ಇದ್ದ ಕಾಯಿದೆಯನ್ನು ಹೆಚ್ಚು ಮಾಡಬೇಕಾದ ಅವಶ್ಯಕತೆಯೂ ಇತ್ತು. ಇದಕ್ಕೆ ಕಾರಣವೇನೆಂದರೆ, ಹೆಚ್ಚು ಮಾಡಿದಂಥ ಆರು ತಿಂಗಳ ಅವಧಿಯಲ್ಲಿ ಸುಮಾರು 30 271 ಅರ್ಜಿಗಳು ಹೊಸದಾಗಿ ಬಂದವು; ಅಂದರೆ ಸುಮಾರು ಒಂದು ತಿಂಗಳಿಗೆ ಆರು ಸಾವಿರಕ್ಕಿಂತ ಹೆಚ್ಚು ಅರ್ಜಿಗಳು ಬಂದವು. ಈ ದೃಷ್ಟಿಯಿಂದ, ಇನ್ನೂ ಹೆಚ್ಚು ಅರ್ಜಿಗಳು ಮುಂದೆ ಕೂಡ ಬರಬಹುದೆಂದು ಆಲೋಚನೆ ಮಾಡಿ, ಆರು ತಿಂಗಳು ಅವಧಿಯಲ್ಲಿ ಹೆಚ್ಚು ಮಾಡಬೇಕಾಗಿ ಬಂತು ಆದುದರಿಂದ, 1977 ನೇ ಇಸವಿ ಜೂನ್ 30 ರವರೆಗೆ ಅವಧಿ ವಿಸ್ತರಣೆ ಮಾಡುವ ಸುಗ್ರೀವಾಜ್ಞೆಯನ್ನು ಹೊರಡಿಸಬೇಕಾಗಿತ್ತು. ಇದು ಮೊದಲನೆಯದು. ಎರಡನೆಯದಾಗಿ ಗೇಣಿದಾರ ಅಥವಾ ಉಪ ಗೇಣಿದಾರ ತಾನು ಕೊಡಬೇಕಾದ ಕಂತನ್ನು 20 ವಾರ್ಷಿಕ ಕಂತುಗಳಲ್ಲಿ ಕೊಡಬೇಕೆಂದು ಒಂದು ಅಂಶ ಕಾಯಿದೆಯಲ್ಲಿತ್ತು. ಆದರೆ, ಅದನ್ನು ಪೂರಾ ಒಂದೇ ಕಂತಿನಲ್ಲಿ ಕೊಡಬೇಕೆಂದು ತಿದ್ದುಪಡಿಯಾಗಿತ್ತು. ಇದರಿಂದ ಅವರಿಗೆ ಬಹಳ ಅನಾನುಕೂಲವಾಯಿತು. ಈ ಅನಾನುಕೂಲಕ್ಕೆ ಕಾರಣವೇನೆಂದರೆ, ರಾಜ್ಯದ ಭೂ ಅಭಿವೃದ್ಧಿ ಬ್ಯಾಂಕ್ ಮೂಲಕ ಗೇಣಿದಾರರಿಗೆ ಅಥವಾ ಉಪಗೇಣಿದಾರರಿಗೆ ಹಣ ಸಹಾಯವನ್ನು ಒದಗಿಸುವ ವ್ಯವಸ್ಥೆಯನ್ನು ನಾವು ಮಾಡಿದ್ದೆವು.

ಇದು ನಮಗೆ ರಿಸರ್ವ್ ಬ್ಯಾಂಕಿನ ಮೂಲಕ ಹಣದ ಸಹಾಯವನ್ನು ದೊರಕಿಸಿಕೊಡತಕ್ಕಂಥ ಒಂದು ವ್ಯವಸ್ಥೆ. ಭೂಬ್ಯಾಂಕಿನ ವ್ಯವಹಾರದ ಶೇಕಡ 10 ರಷ್ಟನ್ನು ಮಾತ್ರ ಕೊಡಬೇಕೆಂದು ಅವರು ಹೇಳಿದ್ದಾರೆ. ಇದಕ್ಕಿಂತ ಹೆಚ್ಚು ಹಣವನ್ನು ಕೊಡಬೇಕಾದಂಥ ಸಂದರ್ಭದಲ್ಲಿ ನಾವು ಅವರಿಂದ ಹೆಚ್ಚು ಹಣವನ್ನು ಪಡೆಯುವುದಕ್ಕೆ ಸಾಧ್ಯವಿರಲಿಲ್ಲ. ಆದಕ್ಕೋಸ್ಕರ ರಿಸರ್ವ್ ಬ್ಯಾಂಕಿನವರ ಅಧಿಕಾರಿಗಳು ಇದಕ್ಕೆ ಏನಾದರೂ ಸಲಹೆ ಮಾಡುವುದು ಒಳ್ಳೆಯದು ಎಂದು ಹೇಳಿ ಅವರೂ ಕೂಡ ನಮ್ಮ ಅಧಿಕಾರಿಗಳ ಜೊತೆಯಲ್ಲಿ ಚರ್ಚೆ ಮಾಡಿದರು. ಈ ಕಾರಣದಿಂದ ಕೆಲವು ತಿದ್ದುಪಡಿಗಳನ್ನು ನಾವು ಈಗ ತಂದಿದ್ದೇವೆ. ಈ ತಿದ್ದುಪಡಿ ಏನೆಂದರೆ, ಪರಿಹಾರ ಕೊಡತಕ್ಕ ಸಂದರ್ಭದಲ್ಲಿ ಅದು ಎರಡು ಸಾವಿರ ರೂಪಾಯಿಗಳಿಗಿಂತ ಕಡಿಮೆ ಇದ್ದರೆ ಪೂರಾ ಹಣವನ್ನು ಗೇಣಿದಾರರು ಕೊಡತಕ್ಕದ್ದು. ಇದು ಒಂದನೆಯದು. ಎರಡನೆಯದು ಗೇಣಿದಾರರು ಯಾರು ಜಮೀನನ್ನು ಪಡೆದಿರುತ್ತಾರೋ ಅಂಥವರು ವಿಧವೆಯರಾಗಿದ್ದರೆ, ಅಪ್ರಾಪ್ತವಯಸ್ಕರಾಗಿದ್ದರೆ, ಅಥವಾ ಅಂಗ ವಿಕಲರಾಗಿದ್ದರೆ ಅಥವಾ ಮದುವೆಯಾಗದ ಹೆಣ್ಣು ಮಕ್ಕಳಾಗಿದ್ದರೆ ಅಂಥವರಿಗೆ ಪರಿಹಾರ ಕೊಡತಕ್ಕ ಸಂದರ್ಭದಲ್ಲಿ ಪೂರಾ ಹಣವನ್ನು ಡಿಪಾಸಿಟ್ ಮಾಡಬೇಕು. ಮೂರನೆಯದು, ಯಾರು ಜಮೀನನ್ನು ಗೇಣಿದಾರ ಪಡೆದಿರುತ್ತಾನೇ ಅವರು ಅಥವಾ ಅದು ಧಾರ್ಮಿಕ ಸಂಸ್ಥೆಯಾಗಿದ್ದರೆ ಅದರ ಪೂರ್ತಾ ಹಣವನ್ನು ಡಿಪಾಸಿಟ್ ಮಾಡಬೇಕು. ಇದಲ್ಲದೆ ಏನೂ ಜಮೀನು ಇಲ್ಲದೆ, ಇರುವ ಜಮೀನು ಗೇಣಿ ಕೊಟ್ಟವರಿಗೆ ಮೊದಲೇ ಎರಡು ಸಾವಿರ ರೂಪಾಯಿಗಳನ್ನು ಡಿಪಾಸಿಟ್ ಮಾಡತಕ್ಕದ್ದು. ಇದಕ್ಕಿಂತ ಹೆಚ್ಚಿಗೆ ಪರಿಹಾರವನ್ನು ಕೊಡತಕ್ಕ ಸಂದರ್ಭದಲ್ಲಿ ಯಥಾಪ್ರಕಾರ 20 ಕಂತಿನಲ್ಲಿ ಹಣವನ್ನು ಕೊಡತಕ್ಕ ವ್ಯವಸ್ಥೆ ಮಾಡಬೇಕು ಎನ್ನುವುದು ಒಂದು ಅಂಶ. ಇದರಲ್ಲಿ ಮೊದಲನೆಯದು ಗೇಣಿದಾರನು ತನ್ನ ಹೆಸರನ್ನು ರಿಜಿಸ್ಟರ್ ಮಾಡಬೇಕು. ಮತ್ತೆ ಧಾರ್ಮಿಕ ಸಂಸ್ಥೆಗಳಿಗೆ ಕೊಡತಕ್ಕ ಹಣದಿಂದ ಒಂದು ಕಡೆ ಕರ್ನಾಟಕ ಆನ್ಯುಟಿ ಫಂಡ್ ಎಂದು ಮಾಡಿ ಅದನ್ನು ವರ್ಷ ವರ್ಷ ಕೊಡತಕ್ಕ ಒಂದು ವ್ಯವಸ್ಥೆಯನ್ನೂ ಮಾಡಿದ್ದೇವೆ. ಈ ಅಂಶವೂ ತಿದ್ದುಪಡಿಯಲ್ಲಿ ನಮೂದಾಗಿದೆ. ಗೇಣಿದಾರರು ಎರಡು ಸಾವಿರ ರೂಪಾಯಿಗಳನ್ನು ಡಿಪಾಸಿಟ್ ಮಾಡಿದ ಕೂಡಲೇ ಅವರಿಗೆ ಒಂದು ಸರ್ಟಿಫಿಕೇಟ್ ಕೊಟ್ಟರೆ ಒಳ್ಳೆಯದು ಎಂದು, ಮುಂದೆ ಅವರಿಗೆ ಯಾವ ತೊಂದರೆಗಳೂ ಆಗದ ರೀತಿಯಲ್ಲಿ ಮಾಡಿದ್ದೇವೆ. ಈ ತಿದ್ದುಪಡಿಯಲ್ಲಿ ಬಂದಿರತಕ್ಕ ಮುಖ್ಯ ಅಂಶಗಳು ಇವು. ಭೂಸುಧಾರಣಾ ಕಾಯಿದೆಯನ್ನು ತ್ವರಿತವಾಗಿ ಜಾರಿಗೆ ತರುವುದಕ್ಕೆ ಮತ್ತು ಗೇಣಿದಾರರಿಗೆ ಹಕ್ಕಿನ ಅವಕಾಶ ಕೊಡುವುದಕ್ಕೆ ಇವು ಸಹಾಯಕವಾಗುತ್ತವೆಂದು ತಿಳಿಸಿ. ಇದಕ್ಕೆ ಸಭೆ ಒಪ್ಪಿಗೆ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

†ಶ್ರೀ ಕಾಗೋಡು ತಿಮ್ಮಪ್ಪ.—(ಸಾಗರ) ಅಧ್ಯಕ್ಷರೇ, ಮಾನ್ಯ ಕಂದಾಯ ಸಚಿವರು ತಂದಿರತಕ್ಕ ತಿದ್ದುಪಡಿಯ ಮಸೂದೆಯ ಬಗ್ಗೆ ಎರಡು ಮಾತುಗಳನ್ನು ಹೇಳುತ್ತೇನೆ ಈ ಮಸೂದೆ ಎರಡು ಭಾಗಗಳನ್ನು ಹೊಂದಿವೆ. ಗೇಣಿದಾರರಿಗೆ ಹಕ್ಕುಬಾಧ್ಯತೆಗಳನ್ನು ರೂಢಿಸಿಕೊಳ್ಳುವುದು ಮತ್ತು ಕಾಲಾವಕಾಶವನ್ನು ವಿಸ್ತಾರ ಮಾಡತಕ್ಕದ್ದು ಒಂದು; ಇನ್ನೊಂದು ಗೇಣಿದಾರರು ಸರ್ಕಾರಕ್ಕೆ ಕೊಡಬೇಕಾದಂಥ ಪ್ರೀಮಿಯಂ ಬಗ್ಗೆ ಅವರಿಗೆ ಕೊಡತಕ್ಕ ಒಂದು ಸೌಲಭ್ಯ ಈ ಎರಡು ಭಾಗಗಳೂ ಇದರಲ್ಲಿ ಸೇರಿವೆ. ಇದರಲ್ಲಿ ಮುಖ್ಯವಾಗಿ ಸಮಯವನ್ನು ವಿಸ್ತಾರ ಮಾಡತಕ್ಕದ್ದು ಏನು ಇದೆ ಅದು ಬಹುಶಃ ಇನ್ನು ಸಾಕು ಎಂದು ಕಾಣುತ್ತದೆ. ಕಾರಣ ಏನೆಂದರೆ ಈಗಾಗಲೇ ಇದರ ಬಗ್ಗೆ ಸಾಕಷ್ಟು ಪ್ರಚಾರ ನಡೆದಿದೆ ಗೇಣಿದಾರರು ಈಗಾಗಲೇ ಅರ್ಜಿಯನ್ನು ಹಾಕಿರುತ್ತಾರೆ, ಮತ್ತು ಈ ರೀತಿಯಾಗಿ ಅನಾವಶ್ಯಕವಾಗಿ ಸಮಯವನ್ನು ವಿಸ್ತಾರ ಮಾಡುವುದರಿಂದ ಅನಾವಶ್ಯಕವಾದ ತಂಟೆ ತಕರಾರುಗಳನ್ನು ಒಳಗೊಂಡ ಅರ್ಜಿಗಳನ್ನು ಬೇರೆ ಜನರು ಹಾಕುವುದಕ್ಕೆ, ಅವಕಾಶವಾಗುತ್ತದೆ ಇಲ್ಲಿಯವರೆಗೆ ಕೊಟ್ಟಂಥ ವಿಸ್ತಾರ ಇನ್ನು ಮುಂದೆ ಹೋಗುವುದು ಸರಿಯಲ್ಲ. ಭೂಸುಧಾರಣಾ ಕಾನೂನಿಗೆ ಮೊದಲು ತಿದ್ದುಪಡಿ ಮಾಡಿ ಶಾಸನಸಭೆ ಒಪ್ಪಿಗೆ ಕೊಟ್ಟಂಥ ಸಂಧರ್ಭದಲ್ಲಿ ಗೇಣಿದಾರರಿಗೆ ಏನು ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಾರೆ ಅದನ್ನು ಈಗ ಕೈಬಿಡುತ್ತಾ ವಾಪಸ್ ಹಿಂದಕ್ಕೆ ಹೋಗುತ್ತಿದ್ದಾರೆ. ಈಗ ಸರ್ಕಾರದವರು ಪ್ರಗತಿವಿಹೀನವಾಗುತ್ತಿದ್ದಾರೆ ಎನ್ನುವ ಮಾತನ್ನು ನಾನು ಹೇಳುತ್ತೇನೆ. ಗೇಣಿದಾರರಿಗೆ ಜಮೀನು ಕೊಟ್ಟಂಥ ಸಂದರ್ಭದಲ್ಲಿ ಅವರು ಸರ್ಕಾರಕ್ಕೆ ಕೊಡಬೇಕಾದಂಥ ಪರಿಹಾರವನ್ನು ಒಂದು ಮೊತ್ತಕ್ಕಿಂತ ಇನ್ನೂ ಸ್ವಲ್ಪ ಕಡಿಮೆ ಮಾಡಿ ಪರಿಹಾರ ಇಲ್ಲದೆ ಇದ್ದ ಕೆಲವು ವರ್ಗದ ಗೇಣಿದಾರರಿಗೆ ಭೂಮಿಯನ್ನು ಕೊಡತಕ್ಕ ಒಂದು ಅವಕಾಶ ಸರ್ಕಾರದ ಕೈಯಿಂದ ಹೋಗುತ್ತದೆ ಈ ದಿಸೆಯಲ್ಲಿ ಹೆಚ್ಚಿನ ಪ್ರಗತಿಯನ್ನು ಸಾಧನೆ ಮಾಡುತ್ತಾರೆ ಎಂದು ತಿಳಿದುಕೊಂಡಿರತಕ್ಕ ನಮಗೆ ಇದರಿಂದ ಭ್ರಮ ನಿರಸನವಾಗುತ್ತದೆ. ಇವರು ಇನ್ನು ಮುಂದೆ ಹೋಗಿ ಗೇಣಿದಾರರಿಗೆ ಕೊಟ್ಟಂಥ ಭೂಮಿಯನ್ನು ವಾಪಸ್ ಪಡೆಯುವುದಕ್ಕೆ ಪ್ರಯತ್ನ ಪಟ್ಟರೆ ಅದು ಆಶ್ಚರ್ಯವೇನಲ್ಲ. ಆದರೂ ಕೂಡ ಮಂತ್ರಿಗಳು ಪ್ರಪ್ರಥಮದಲ್ಲಿ ಹಿಡಿದಂಥ ಮಾರ್ಗ, ಈಗ ಹೋಗತಕ್ಕ ಮಾರ್ಗವನ್ನು ನೋಡಿದರೆ ನಾವು ಈ ಬಗ್ಗೆ ವಿಷಾದವನ್ನು ವ್ಯಕ್ತಪಡಿಸಬೇಕಾಗುತ್ತದೆ. ಇದರ ಬಗ್ಗೆ ನಾವು ಸರ್ಕಾರಕ್ಕೆ ಇದು ಖಂಡನೀಯವೆಂದು ಹೇಳಬೇಕಾಗುತ್ತದೆ. ತಾವು ಹಿಂದೆ ಯಾವ ತತ್ವವನ್ನು ಹಿಡಿದಿದ್ದೀರೋ ಅದನ್ನು ನಾವು ಸ್ವಾಗತ ಮಾಡಿದ್ದೇವೆ. ಈಗ ಅದನ್ನು ಕೈಬಿಟ್ಟು ಬೇರೆ ಮಾರ್ಗಕ್ಕೆ ಹೋಗುವುದು ಒಳ್ಳೆಯದಲ್ಲ. ತಾವು ತಿಳಿದುಕೊಂಡಿರಬಹುದು ಗೇಣಿದಾರರು ಸಂಘಟನೆಯಾಗಲಿಕ್ಕೆ ಮತ್ತು ಅವರು ತಮ್ಮ ಅಹವಾಲನ್ನು ಹೇಳಿಕೊಳ್ಳುವುದಕೆ ಬರುವುದಿಲ್ಲ ಎಂದು. ಅದರೆ ಇದು ಅವರಿಗೆ ಕರಾಳ ಶಾಸನವಾಗುತ್ತದೆ ಎಂದು ನಾನು ಹೇಳಬಯಸುತ್ತೇನೆ. ಚುನಾವಣೆಯ ಕಾಲದಲ್ಲಿ ಬಡವರಿಗೆ ಸ್ವಲ್ಪ ರುಚಿ ಹಚ್ಚುತಕ್ಕ ಕೆಲಸಗಳನ್ನು ಮಾಡುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಇಂಥ ತೀರ್ಮಾನವನ್ನು ಮಾಡುವುದಕ್ಕೆ ಒಂದು ಅಂದಾಜು ಬೇಡವೆ ? ಚುನಾವಣೆಯ ಕಾಲದಲ್ಲಿ ಸರ್ಕಾರದವರು ದೊಡ್ಡ ಪ್ರಚಾರವನ್ನು ಮಾಡಿದರು ನಾವು ಭೂಸುಧಾರಣೆಯನ್ನು ಜಾರಿಗೆ ತಂದಿದ್ದೇವೆ. ಗೇಣಿದಾರರಿಗೆ ಎಲ್ಲಾ ಜಮೀನನ್ನು ಕೊಟ್ಟಿದ್ದೇವೆ ? ಜನತಾ ಪಕ್ಷದವರು ಅಧಿಕಾರಕ್ಕೆ ಬಂದರೆ ಎಲ್ಲಾ ಜಮೀನನ್ನು ಮತ್ತೆ ವಾಪಸ್ ತೆಗೆದುಕೊಳ್ಳುತ್ತಾರೆ ಎಂದು ಅನೇಕ ಕಡೆಗಳಲ್ಲಿ ಪ್ರಚಾರ ಮಾಡಿದ್ದಾರೆ. ಇಲ್ಲದೆ ಜನತಾ ಪಕ್ಷಕ್ಕೆ ವೋಟು ಕೊಡಬೇಡಿ ಎಂದು ಹೇಳಿದ್ದಾರೆ. ಹೆಚ್ಚುಕಡಿಮೆ ಭೂಸುಧಾರಣೆಯನ್ನು ತರುವುದಕ್ಕೆ ಗೇಣಿದಾರರನ್ನು ರಕ್ಷಣೆ ಮಾಡುವುದಕ್ಕೆ ಮೊದಲೇ ಪ್ರಯತ್ನವನ್ನು ನಾವು ಮಾಡಿದೆವು. ಗೇಣಿದಾರರ ಪರವಾಗಿ ಮಾತನಾಡದೆ ಇದ್ದಂಥ ಜನ ಹೊಸದಾಗಿ ಅವರ ಪರವಾಗಿ ಮಾತನಾಡುವುದಕ್ಕೆ ಹೊರಟಿದ್ದಾರೆ. ಮಾನ್ಯ ಶೀರ್ನಾಳಿ ಚಂದ್ರಶೇಖರ್ ಅವರೂ ಗೇಣಿದಾರರ ಪರವಾಗಿ ಹೋರಾಟ ಮಾಡಿದರು. ಭೂಮಾಲೀಕರನ್ನು ಇಟ್ಟುಕೊಂಡು ದಾವೆ ಹಾಕಿ ಗೇಣಿದಾರರನ್ನು ಬಡಿಸತಕ್ಕ ಕೆಲಸಕ್ಕೆ ಅರ್ಜಿ ಹಾಕಿ ವಕಾಲತ್ತು ವಹಿಸಿ ಭಾಷಣ ಮಾಡಿದವರೂ ಈಗ ಹೇಳಿದ್ದು ಹೇಳಿದ್ದೆ. ಜನತಾ ಪಕ್ಷ ಅಧಿಕಾರಕ್ಕೆ ಬಂದರೆ ಇನ್ನು ಮೇಲೆ ಕಷ್ಟವಾಗುತ್ತದೆ, ಇವರು ಜನರಿಗೆ ಕೊಟ್ಟಂಥ ಭೂಮಿಯನ್ನು ಕಸಿದುಕೊಳ್ಳುತ್ತಾರೆ ಎನ್ನುವ ಭಯವನ್ನು ಜನರಲ್ಲಿ ಹುಟ್ಟಿಸಿದರು ಆದರೆ ಆಸ್ತಿಯ ಆಸೆ ಎನ್ನುವುದು ಬಹಳ ದೊಡ್ಡದು. ಒಂದು ಸಾರಿ ಆಸೆ ಪಡುವುದಕ್ಕೆ ಪ್ರಯತ್ನ ಪಟ್ಟರೆ ಅವನ್ನು ನಿಲ್ಲಿಸುವುದು ಬಹಳ ಕಷ್ಟ. ಪೊಸೆಷನ್ ಆಫ್ ಪ್ರಾಪರ್ಟಿಯ ಬಗ್ಗೆ ಜನರ ಮನಸ್ಸಿನಲ್ಲಿ

ಜಿಗುಪ್ಸೆ ಉಂಟುಮಾಡುವುದಕ್ಕೆ, ಅದರ ಬಗ್ಗೆ ನಿಷ್ಕ್ರಿಯ ಭಾವನೆಯಿಂದ ಇರಬೇಕು ಎನ್ನುವುದು ಮಾರ್ಕ್ಸ್‌ನ ಸಿದ್ಧಾಂತ ಇದರ ಪ್ರಕಾರ ಮನುಷ್ಯ ಆಸ್ತಿಯನ್ನು ಸಂಪಾದನೆ ಮಾಡುವ ವಿಷಯದಲ್ಲಿ ಸ್ವಲ್ಪವೂ ಅವಕಾಶ ಇರಬಾರದು. ಇದು ಅವರ ಸಿದ್ಧಾಂತ.

ಶ್ರೀಮಾನ್ ಹುಚ್ಚಮಾಸ್ತಿಗೌಡರು ಎಲ್ಲಾ ಕಡೆ ಅಪನ್ನು ಪ್ರಚಾರ ಮಾಡಿದರು. ಯಾವುದಾದರೂ ಸರ್ಕಾರ ಒಂದು ಉತ್ತಮ ಕೆಲಸ ಮಾಡಿದರೆ ಇನ್ನೊಂದು ಸರ್ಕಾರ ಬಂದರೆ ಅದನ್ನು ವಾಪಸ್ಸು ತೆಗೆದುಕೊಳ್ಳುತ್ತದೆಯೇ ? ಶ್ರೀಮಾನ್ ಮುರಾರ್ಜಿ ದೇಸಾಯಿ ಅವರು ಮಹಾರಾಷ್ಟ್ರದಲ್ಲಿ ಮುಖ್ಯ ಮಂತ್ರಿಗಳಾಗಿದ್ದಾಗ ಗೇಣಿ ಶಾಸನವನ್ನು ತಂದಿದ್ದಾರೆ. ಇಷ್ಟು ವರ್ಷ ಕಂದಾಯದ 20 ರಷ್ಟು ಗೇಣಿಯನ್ನು ಕೊಟ್ಟರೆ ಭೂಮಿಯು ಅವರದು ಆಗುತ್ತದೆ ಎಂದು ಮಾಡಿದ್ದಾರೆ. 1972ನೇ ಇಸವಿಯಲ್ಲಿ ಮತ್ತೆ ಈ ಕಾನೂನು ಬಂತು. ಈಗ ಮಾಡಿದಂತಹ ತಿದ್ದುಪಡಿ ಕಾನೂನಿನಲ್ಲಿ ಕಂದಾಯದ 10 ರಷ್ಟು ಗೇಣಿ ಕೊಡಬೇಕು ಎನ್ನುವುದನ್ನು ಮಾಡಿದ್ದಾರೆ. 1962ನೇ ಇಸವಿಯಲ್ಲಿ ಗೇಣಿ ಕಾನೂನು ತಂದಿದ್ದರೂ ಕೂಡ ಅದು ಮುಂದೆ ಹೋಗುತ್ತಿದೆಯೇ ಹೊರತು ಹಿಂದಕ್ಕೆ ಬರಲಿಲ್ಲ. ಹೀಗಿರುವಾಗ ಚುನಾವಣೆಯ ಸಂದರ್ಭದಲ್ಲಿ ಜನಗಳಿಗೆ ಸುಮ್ಮನೆ ಅಪಪ್ರಚಾರ ಮಾಡಿದ್ದಾರೆ ಜನತಾ ಪಕ್ಷ ಅಧಿಕಾರಕ್ಕೆ ಬಂದರೆ ಗೇಣಿ ಜಮೀನನ್ನು ವಾಪಸ್ಸು ತೆಗೆದುಕೊಳ್ಳುತ್ತಾರೆಂದು ಅಪಪ್ರಚಾರ ಮಾಡಿದ್ದಾರೆ. ಇದರಿಂದ ಜನಗಳಿಗೆ ಭಯ ಬರುತ್ತದೆ. ಆದ್ದರಿಂದ ಚುನಾವಣೆಯ ಕಾಲದಲ್ಲಿ ಅವರು ಈ ರೀತಿ ಹೇಳಬಾರದಾಗಿತ್ತು. ಮತ್ತೆ 1974ನೇ ಇಸವಿಯಲ್ಲಿ ತಂದಂತಹ ಕಾನೂನಿನಲ್ಲಿ ಏನು ಮಾಡಿದ್ದಾರೆ ಎಂದರೆ 20 ಇನ್‌ಸ್ಟಾಲ್‌ಮೆಂಟಿನಲ್ಲಿ ಪರಿಹಾರವನ್ನು ಕೊಡಬೇಕು ಮತ್ತು 4½ ಪರ್ಸೆಂಟಿನಂತೆ ಬಡ್ಡಿಯನ್ನು ಕೊಡಬೇಕು ಎಂದು ಮಾಡಿದ್ದನ್ನು ತಪ್ಪಿಸಿ ಎಲ್ಲಾ ಹಣವನ್ನು ಭೂ ಅಭಿವೃದ್ಧಿ ಬ್ಯಾಂಕಿನಿಂದ ತೆಗೆದುಕೊಳ್ಳುತ್ತೇವೆ ಅದಕ್ಕೆ ಗೇಣಿದಾರ 1 ಪರ್ಸೆಂಟಿನಂತೆ ಬಡ್ಡಿ ಕೊಡಬೇಕು ಎಂದು ಮಾಡಿದ್ದಾರೆ. 1974ನೇ ಇಸವಿಯಲ್ಲಿ ಜಾರಿಗೆ ತಂದದ್ದನ್ನು ಈಗ ಕೈಬಿಟ್ಟಿದ್ದಾರೆ ಕಾರಣವೇನು ? ನಮಗೆ ಹಣ ಕಾಸಿನ ತೊಂದರೆ ಇದೆ, ರಿಜರ್ವ್ ಬ್ಯಾಂಕಿನವರು ಒಪ್ಪುವುದಿಲ್ಲ ಎನ್ನುವ ಮಾತನ್ನು ಹೇಳುತ್ತಿದ್ದಾರೆ. ಅದಕ್ಕಾಗಿ ನಾನು ಒಂದು ಪ್ರಶ್ನೆಯನ್ನು ಕೇಳುತ್ತೇನೆ ನಾನು, ಈ ಸಭೆಗೆ 1972ನೇ ಇಸವಿಯಲ್ಲಿ ಸದಸ್ಯನಾಗಿ ಬಂದೆ 1972ನೇ ಇಸವಿಯಿಂದಲೂ ಕೂಡ 3½ ಲಕ್ಷ ಎನ್. ಜಿ. ಒ. ಗಳಿಗೆ ಪ್ರತಿ ವರ್ಷವೂ ಕೂಡ ಸಂಬಳವನ್ನು ಜಾಸ್ತಿ ಮಾಡುತಿದ್ದಾರೆ. 72, 73 74, 75 76 ಹೀಗೆ ಪ್ರತಿ ವರ್ಷವೂ ಕೂಡ ಸಂಬಳವನ್ನು ಜಾಸ್ತಿ ಮಾಡುತ್ತಿದ್ದಾರೆ. ಈ ವರ್ಷ 1977ನೇ ಇಸವಿಯಲ್ಲಿ ಸರ್ಕಾರಿ ನೌಕರರಿಗೆ 20 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಈಗ ಒಂದು ವರ್ಷದ ಹಿಂದೆ ನಾವು ಮಾನ್ಯ ಮಂತ್ರಿಗಳನ್ನು ಗ್ರಾಮಾಂತರ ರಸ್ತೆಗಳನ್ನು ಮಾಡಿಸುವುದಕ್ಕೆ 10 ಕೋಟಿ ರೂಪಾಯಿಗಳನ್ನು ಕೊಡಿ ಎಂದು ಅವರ ಚೇಂಬರ್‌ನಲ್ಲಿ ಸಭೆ ನಡೆದಾಗ ಕೇಳಿದಂತಹ ಸಂದರ್ಭದಲ್ಲಿ ಅವರು ಹೆದರಿಕೊಂಡು ನಮ್ಮ ಮಾತನ್ನು ಅವರು ಕೇಳಲಿಲ್ಲ. ಈಗ ಸರ್ಕಾರಿ ನೌಕರರಿಗೆ 20 ಕೋಟಿ ರೂಪಾಯಿಗಳನ್ನು ಸಂಬಳ ಜಾಸ್ತಿ ಮಾಡುವುದಕ್ಕೆ ಕೊಟ್ಟಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳು ನಾರಾಯಣಪ್ಪನವರ ಪೇ ಕಮಿಷನ್ ವರದಿಯ ಮೇಲೆ ಚರ್ಚೆ ಮಾಡುವುದಕ್ಕೆ ಈ ಸದನದಲ್ಲಿ ಅವಕಾಶ ಮಾಡಿಕೊಡುತ್ತೇವೆ ಎಂದು ಹೇಳಿ ಈಗ ಅದನ್ನು ಚರ್ಚೆ ಮಾಡಿ ಈ ಸಭೆಯ ಒಪ್ಪಿಗೆಯನ್ನು ಕೊಡುವುದಕ್ಕೆ ಅವಕಾಶ ಮಾಡಲಿಲ್ಲ. ಈ ಸಭೆಯ ಅಭಿಪ್ರಾಯವನ್ನು ತೆಗೆದುಕೊಳ್ಳಲಿಲ್ಲ ನೇರವಾಗಿ ಸರ್ಕಾರದವರು ತಮಗೆ ಅಧಿಕಾರ ಇದೆ ಎಂದು ತಿಳಿದುಕೊಂಡು ಪೇ ಕಮಿಷನ್ ಶಿಫಾರಸ್ಸನ್ನು ಜಾರಿಗೆ ಕೊಟ್ಟರು. ಈ ವಿಷಯವನ್ನು ಈ ಸಭೆಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೊಡದೆ ಇದ್ದುದಕ್ಕಾಗಿ ಈ ಸಭೆಯಲ್ಲಿ ಹಕ್ಕುಬಾಧ್ಯತಾ ನಿರ್ಣಯವನ್ನು ಮಂಡಿಸುವುದಕ್ಕೆ ಅವಕಾಶ ಇಲ್ಲ. ನಾನು ಯಾವ ಅಷ್ಯೂರೆನ್ಸ್ ಕೊಟ್ಟಿರಲಿಲ್ಲ ಎಂದು ಹೇಳಿದರು. ಸರ್ಕಾರಿ ನೌಕರರು ತಮ್ಮ ಮೇಲೆ ಪ್ರಭಾವ ಬೀರುವುದಕ್ಕೆ ಸಾಧ್ಯ ಎಂದು ತಿಳಿದುಕೊಂಡು ಪೇಕಮಿಷನ್ ಶಿಫಾರಸ್ಸನ್ನು ಜಾರಿಗೆ ಕೊಟ್ಟರು. ಬೇರೆ ಯಾವುದಕ್ಕಾದರೂ ಹಣ ಕೇಳಿದರೆ ಏನೇನೋ ಕಾರಣಗಳನ್ನು ಹೇಳುತ್ತಾರೆ. ದೇಶದ ಗೇಣಿದಾರರಿಗೆ ಸಹಾಯ ಮಾಡತಕ್ಕ ಸಂದರ್ಭದಲ್ಲಿ ರಿಜರ್ವ್ ಬ್ಯಾಂಕಿನವರು ಒಪ್ಪುವುದಿಲ್ಲ ಹಣಕಾಸಿನ ಅನುಕೂಲತೆ ಇಲ್ಲ ಎಂದು ಹೇಳುತ್ತಾರೆ. ಹರಿಜನ ಗಿರಿಜನರಿಗೆ ಸಹಾಯ ಮಾಡತಕ್ಕ ಸಂದರ್ಭ ಬಂದರೆ ಹಣಕಾಸಿನ ಕೊರತೆಯನ್ನು ಹೇಳುತ್ತಾರೆ ಇದು ಯಾವ ನ್ಯಾಯ ಎಂದು ನಾನು ಪ್ರಶ್ನೆ ಮಾಡುತ್ತೇನೆ. ಮಾನ್ಯ ಮಂತ್ರಿಗಳು ಒಂದು ತೀರ್ಮಾನಕ್ಕೆ

ಬರುವುದಕ್ಕೆ ಮುಂಚೆ ಸರ್ಕಾರಕ್ಕೆ ಹಣಕಾಸಿನ ತೊಂದರೆ ಇದ್ದರೆ ಹಣ ಸಂಗ್ರಹಣೆ ಮಾಡುವುದಕ್ಕೆ ತಾಪತ್ರಯ ಉಂಟಾಗಿದ್ದರೆ ಯಾವ ಸಂದರ್ಭದಲ್ಲಾದರೂ ಸರ್ಕಾರದವರು ವಿರೋಧಪಕ್ಷದವರನ್ನು ಸಭೆಗೆ ಕರೆದು ಅದಕ್ಕೆ ಸಾಧಕಬಾಧಕಗಳನ್ನು ಕಂಡು ಹಿಡಿಯುವುದಕ್ಕೆ ಪ್ರಯತ್ನ ಮಾಡಿದ್ದಾರೆಯೇ ? ಅದನ್ನು ಮಾಡಲಿಲ್ಲ. ಕೇವಲ ತಮ್ಮ ಅನುಕೂಲಕ್ಕೆ ತಕ್ಕಂತೆ ಕಾನೂನು ಜಾರಿ ಮಾಡುವುದು ಸರಿಯೇ ? ಈಗ ಒಂದು ಸಮಸ್ಯೆ ಏನೆಂದರೆ ಭೂಸುಧಾರಣೆಯನ್ನು ಜಾರಿಗೆ ತಂದ ಮೇಲೆ ಭೂ ಮಾಲೀಕರ ಪರಿಹಾರವನ್ನು ಬಗೆಹರಿಸುವುದಕ್ಕೆ ಅಶಕ್ತಿ ಇಲ್ಲವೆಂದು ಕಾಣುತ್ತದೆ. ಮೊದಲು 1974ನೇ ಇಸವಿಯಲ್ಲಿ ಈ ಕಾನೂನು ಜಾರಿಗೆ ಬಂದಾಗ ಗೇಣಿದಾರ ಸರ್ಕಾರಕ್ಕೆ ಪರಿಹಾರವನ್ನು 20 ಕಂತಿನಲ್ಲಿ 4½ ಪರ್ಸೆಂಟ್ ಬಡ್ಡಿ ದರದಲ್ಲಿ ಕೊಡಬೇಕೆಂದು ತೀರ್ಮಾನ ಮಾಡಿದ್ದರು. ಇವೊತ್ತು ಏತಕ್ಕೆ ಅದನ್ನು ಮಾಡಲಿಲ್ಲ. ಈ ಇಲಾಖೆಯ ತಜ್ಞರನ್ನೂ, ಸಂಬಂಧಪಟ್ಟ ಪರಿಣತರನ್ನು ಏತಕ್ಕೆ ಸಲಹೆ ಕೇಳಲಿಲ್ಲ ? ಈಗ ಇಂಥಾ ಒಂದು ಕಾನೂನು ಮಾಡಿ ಅದನ್ನು ಜಾರಿಗೆ ಕೊಡತಕ್ಕ ಶಕ್ತಿ ಸರ್ಕಾರಕ್ಕೆ ಇಲ್ಲದೇ ಹೋದರೆ ಅದನ್ನು ಏತಕ್ಕೆ ಕೈಗೆ ತೆಗೆದುಕೊಂಡಿದ್ದೀರಿ ? ಇವೊತ್ತು ಭೂ ಸುಧಾರಣೆಯ ಕೆಲಸ ಏನು ಮಾಡಿದ್ದೀರಿ ಅತ್ಯಂತ ಕ್ರಾಂತಿಕಾರಿಯಾದ ಕೆಲಸವನ್ನು ಮಾಡಿದ್ದೇವೆ ಎಂದು ಬೆನ್ನು ತಟ್ಟಿಕೊಳ್ಳುತ್ತಾರೆ ಕೇವಲ ಒಂದು ಹಂತದ ಕೆಲಸ ಮಾಡಿದ್ದಾರೆ. ಒಂದು ಮೆಟ್ಟಲನ್ನು ಹತ್ತಿದ್ದಾರೆ, ಜಮೀನ್ದಾರ ಮತ್ತು ಗೇಣಿದಾರರಿಗೆ ಇದ್ದಂತಹ ಸಂಬಂಧವನ್ನು ಕಡಿದು ಹಾಕಿದ್ದಾರೆ. ಸಂಪೂರ್ಣವಾಗಿ ಭೂಮಿಯ ಒಡೆತನವನ್ನು ಕೊಡತಕ್ಕದ್ದಾಗಲೀ, ಗೇಣಿದಾರರನ್ನು ಸಂಪೂರ್ಣವಾಗಿ ಶಾಸನದಿಂದ ವಿಮುಕ್ತ ಮಾಡಿ ಅವನನ್ನು ಸರ್ವ ಸ್ವತಂತ್ರನನ್ನಾಗಿ ಮಾಡತಕ್ಕ ಕೆಲಸವನ್ನು ಸಂಪೂರ್ಣವಾಗಿ ನಾವು ಸಾಧನೆ ಮಾಡಿದ್ದೇವೆ ಎನ್ನುವ ಸಮಾಧಾನ ಅವರಿಗೆ ಇರಕೂಡದು. ಇನ್ನೂ ಮೊದಲನೆಯ ಹಂತದಲ್ಲಿಯೇ ಗಾಡಿಯನ್ನು ದಬ್ಬುವ ಕೆಲಸ ಪ್ರಾರಂಭವಾಯಿತು. ಗಾಡಿ ಮುಂದೆ ಹೋಗುವುದು ಹೇಗೆ ? ಈಗ ತಂದಿರುವ ತಿದ್ದುಪಡಿಯ ಪ್ರಕಾರ ಒಂದು ವರ್ಗದ ಗೇಣಿದಾರರಿಗೆ ಒಂದು ಸೌಲಭ್ಯ ಇನ್ನೊಂದು ವರ್ಗದವರಿಗೆ ಒಂದು ಸೌಲಭ್ಯ ಎಂದು ತಾರತಮ್ಯ ಮಾಡುವುದು ಏತಕ್ಕೆ ? ಇವರು ಕೊಟ್ಟಂತಹ ಆಶ್ವಾಸನೆ ಏನು ? ಮಾಡತಕ್ಕ ಕಾರ್ಯಕ್ರಮ ಏನು ? ದಯವಿಟ್ಟು ಆಲೋಚನೆ ಮಾಡಬೇಕು. ಅದಕ್ಕೋಸ್ಕರ ನಾನು ಮಾನ್ಯ ಸಚಿವರಿಗೆ ಹೇಳುತ್ತೇನೆ, ಜನತೆ ನಿಮ್ಮನ್ನು ಸುಮ್ಮನೆ ಬಿಡುವುದಿಲ್ಲ ಎಂದು. ಇವರು ಯಾವ ವರ್ಗದ ಜನರಿಂದ ಬೆಂಬಲವನ್ನು ಪಡೆದರೋ ಆ ವರ್ಗದ ಜನರು ಬಾಳು ಮಾಡುವ ಗತಿ ಮಾಡದಿದ್ದರೆ ಆ ಜನಗಳೇ ಇವರ ಮೇಲೆ ಎದ್ದು ಬೀಳುತ್ತಾರೆ. ಮತ್ತು ಇಷ್ಟು ವರ್ಷ ಹೋರಾಟ ಮಾಡಿದವರಿಗೆ ಸುಲಭ ಕಂತಿನಲ್ಲಿ ಹಣವನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕು. ಇಲ್ಲದಿದ್ದರೆ ಮುಫತ್ತಾಗಿ ಭೂಮಿಯನ್ನು ಸರ್ಕಾರ ಮಾಡಬೇಕಾಗಿತ್ತು. ಈ ಗೇಣಿದಾರರು ಅನೇಕ ವರ್ಷಗಳಿಂದ ಶೋಷಣೆಗೆ ಒಳಗಾಗಿದ್ದಾರೆ. ಅವರಲ್ಲಿ ಸಂಘಟನೆ ಇರುವುದಿಲ್ಲ. ಪ್ರಬಲ ಮುಖಂಡತ್ವ ಇರುವುದಿಲ್ಲ. ಅವರು ಒಂದು ಕಡೆ ಎಲ್ಲರೂ ಸೇರುವುದಿಲ್ಲ. ಇಂಥವರಿಗೆ ಕೊಟ್ಟಿರತಕ್ಕ ಕೆಲವು ರಿಯಾಯಿತಿಯನ್ನು ಮತ್ತೆ ವಾಪಸ್ಸು ಪಡೆಯುವುದಕ್ಕೆ ಪ್ರಯತ್ನ ಮಾಡಿದರೆ ಅದು ಸಾಧ್ಯವಾಗ ವುದಿಲ್ಲ. ಈ ಭೂ ಸುಧಾರಣೆ ಕಾನೂನಿನಲ್ಲಿ ಸಂಪೂರ್ಣವಾಗಿ ಪ್ರಗತಿಯನ್ನು ಸಾಧನೆ ಮಾಡಿದೇವೆ ಎನ್ನತಕ್ಕಂಥಾ ತೃಪ್ತಿ ಮಾನ್ಯ ಸದಸ್ಯರಿಗೆ ಇರಬಾರದು. ಆ ರೀತಿ ಅವರು ಭಾವನೆ ಮಾಡಿಕೊಂಡಿದ್ದರೆ ತಪ್ಪಾಗುತ್ತದೆ. ಹಳ್ಳಿಗಾಡಿನಿಂದ ಬಂದಿರತಕ್ಕ ಮತ್ತು ಗೇಣಿದಾರರ ಪರಿಚಯವಿರತಕ್ಕ ಇವರು ಅವಾಗ ಇನ್ನೂ ಹೆಚ್ಚಿನ ಸಹಾಯ ಮಾಡತಕ್ಕಂಥಾ ಸಂದರ್ಭದಲ್ಲಿ ಅವರಿಗೆ ಕೊಟ್ಟಂತಹ ಸೌಲಭ್ಯವನ್ನು ವಾಪಸ್ಸು ಪಡೆಯುವುದಕ್ಕೆ ಹೊರಟಿರುವುದು ಸರಿಯಲ್ಲ. ಇದು ಪ್ರಗತಿಗೆ ಹಾನಿಯಾಗುತ್ತದೆ ಪ್ರಗತಿ ಪರವಾಗುವುದಿಲ್ಲ. ಆದ್ದರಿಂದ ಗೇಣಿದಾರರಿಗೆ ಕೊಟ್ಟಂತಹ ಸೌಲಭ್ಯಗಳನ್ನು ವಾಪಸ್ಸು ಪಡೆಯುವುದಕ್ಕೆ ಪ್ರಯತ್ನ ಮಾಡುವುದು ಸರಿಯಲ್ಲ.

12-00 NOON

ಆದ್ದರಿಂದ ಈ ಬಗ್ಗೆ ತಾವು ಉತ್ತಮವಾದಂಥ ತಿದ್ದುಪಡಿಯನ್ನು ತೆಗೆದುಕೊಂಡು ಬರಬೇಕಾಗಿತ್ತು. ಕೊನೆಯ ಪಕ್ಷ ಸಣ್ಣ ಹಿಡುವಳಿದಾರರಿಗಾದರೂ ಸಹ ಜಮೀನನ್ನು ಮುಫತ್ತಾಗಿ ಕೊಡುವ ಬಗ್ಗೆ ತಿದ್ದುಪಡಿ ತರುತ್ತಾರೆಂದು ನಾವು ನಿರೀಕ್ಷೆ ಮಾಡಿದ್ದೆವು. ಆದರೆ ಅದರಂತೆ ಮಾಡಲಿಲ್ಲ.

ಮಾನ್ಯ ಪ್ರಭಾಕರ್ ಅವರು ಮತ್ತು ಬಸವಲಿಂಗಪ್ಪನವರ ಒಂದು ನೇತೃತ್ವದಲ್ಲಿ ಸಣ್ಣ ಹಿಡುವಳಿದಾರರಾದಂಥ ಹರಿಜನರುಗಳಾದರೂ ಮುಫತ್ತಾಗಿ ಜಮೀನನ್ನು ಕೊಡಬಹುದಾಗಿತ್ತು. ಈ ಒಂದು ಪ್ರಗತಿಯ ಹಾದಿಯನ್ನು ತುಳಿಯುವ ಬಗ್ಗೆ ಯೋಚನೆ ಮಾಡಲೂ ಸಹ ಇವರಿಗೆ ಪುರಸೊತ್ತು ಇಲ್ಲವೆಂದು ಕಾಣುತ್ತದೆ. ಈ ಬಗ್ಗೆ ಸರ್ಕಾರ ಸ್ವಲ್ಪ ಸಮಯ ತೆಗೆದುಕೊಂಡರೂ ಸರಿಯೇ, ದೀರ್ಘವಾಗಿ ಆಲೋಚನೆ ಮಾಡಬೇಕು. ಈ ರೀತಿ ಮಾಡುವುದರಿಂದ ಆಗತಕ್ಕಂಥ ಸಾಧಕಬಾಧಕಗಳೇನು ಎಂಬ ಬಗ್ಗೆ ಯೋಚನೆ ಮಾಡಬೇಕೆಂದು ನಾನು ಈ ಹಿಂದೆಯೇ ಹೇಳಿದ್ದೆ. ಆದರೆ ಸರ್ಕಾರದವರು ಈಗ ತಂದಿರತಕ್ಕಂಥ ತಿದ್ದುಪಡಿಯಲ್ಲಿ ಏನು ಹೇಳಿದ್ದಾರೆಂದರೆ, ಯಾವ ಗೇಣಿದಾರರು ವಿಧವೆಯರ ಜಮೀನನ್ನು, ಮೈನರ್ಸ್ ಜಮೀನನ್ನು, ಅಸಹಾಯಕರ ಜಮೀನನ್ನು ದೇವಸ್ಥಾನಗಳ ಜಮೀನನ್ನು, ಸಂಸ್ಥೆಗಳಿಗೆ ಸಂಬಂಧಪಟ್ಟ ಜಮೀನನ್ನು ಸಾಗುವಳಿ ಮಾಡುತ್ತಿದ್ದರೆ ಅಂಥವರು ಸಂಬಂಧಪಟ್ಟ ಭೂಮಾಲೀಕರಿಗೆ ಕೊಡತಕ್ಕಂಥ ಪರಿಹಾರ ಧನ 2 ಸಾವಿರ ಅಥವಾ ಅದಕ್ಕಿಂತ ಕಡಿಮೆ ಇದ್ದರೆ ಅದನ್ನು ಒಂದೇ ಗಂಟಿನಲ್ಲಿ ಕೊಡಬೇಕೆಂದು ಇದರಲ್ಲಿ ಹೇಳಲಾಗಿದೆ. ಈ ಮೊದಲು ಇವರು ಸರ್ಕಾರಕ್ಕೆ ನೇರವಾಗಿ 20 ವಾರ್ಷಿಕ ಕಂತುಗಳಲ್ಲಿ ನಾಲ್ಕೂವರೆ ಪರ್ಸೆಂಟ್ ಬಡ್ಡಿ ಸೇರಿಸಿ ಕೊಡುವುದಕ್ಕೆ ಅವಕಾಶವಿತ್ತು. ಆದರೆ ಈಗ ಇಂತಹವರು ಭೂ ಅಭಿವೃದ್ಧಿ ಬ್ಯಾಂಕ್‌ನಿಂದ ಸಾಲ ತೆಗೆದುಕೊಂಡು ಒಂದೇ ಕಂತಿನಲ್ಲಿ ಕೊಡಬೇಕಾಗುತ್ತದೆ. ಇಲ್ಲಿ ಈ ಬ್ಯಾಂಕ್ ಕೂಡ ಸರ್ಕಾರದ್ದೇ ಆದರೂ ಸಹ ಖಾತೆಯನ್ನು ಬದಲಾವಣೆ ಮಾಡುವುದರ ಮೂಲಕ ಬ್ಯಾಂಕ್‌ನಿಂದ ಹಣ ಪಡೆದು ಕೊಡಬೇಕಾಗಿದೆ. ಬ್ಯಾಂಕ್‌ನವರು ಗೇಣಿದಾರರ ಕೈಗೆ ಹಣವನ್ನು ಕೊಡುವುದಿಲ್ಲ. ಚೆಕ್ ಕೊಡುತ್ತಾರೆ. ನಂತರ ಅದನ್ನು ತಹಸೀಲ್‌ದಾರರ ಅಕೌಂಟಿಗೆ ಕ್ರೆಡಿಟ್ ಮಾಡಿಕೊಂಡ ಮೇಲೆ ಭೂ ಮಾಲೀಕರಿಗೆ ಹಣ ಕೊಡಲಾಗುತ್ತದೆ. ಭೂ ಅಭಿವೃದ್ಧಿ ಬ್ಯಾಂಕ್‌ನಿಂದ ಸಾಲ ತೆಗೆದುಕೊಂಡರೆ ಆ ಹಣಕ್ಕೆ ಹನ್ನೊಂದು ಪರ್ಸೆಂಟಿನಂತೆ ಬಡ್ಡಿ ಕೊಡಬೇಕು. ಈ ಒಂದು ವ್ಯವಹಾರದಲ್ಲಿ ಗೇಣಿದಾರರಿಗೆ ಎಷ್ಟರಮಟ್ಟಿಗೆ ಅನಾನುಕೂಲವಾಗಿದೆ ಎಂಬುದನ್ನು ವಿವರಿಸಿ ಹೇಳುತ್ತೇನೆ. ಈ ಮೊದಲು ಗೇಣಿದಾರರು ಕಂದಾಯದ ಹತ್ತರಷ್ಟನ್ನು ಅಂದರೆ ಕಂದಾಯ 5 ರೂಪಾಯಿ ಇದ್ದರೆ 50 ರೂಪಾಯಿ ಗೇಣಿ ಕೊಟ್ಟಿದ್ದರೆ ಸಾಕಾಗುತ್ತಿತ್ತು. ಈ ರೀತಿಯಿಂದ ಗೇಣಿದಾರರು ಗೇಣಿ ಕೊಡುವುದನ್ನು ತಪ್ಪಿಸಬೇಕು, ಅವರು ಭೂ ಮಾಲೀಕರ ಒಂದು ಶೋಷಣೆಗೆ ಏನು ಒಳಗಾಗಿದ್ದಾರೆ, ಅದನ್ನು ತಪ್ಪಿಸಬೇಕು, ಅವರಿಂದ ವಿಮುಕ್ತರನ್ನಾಗಿ ಮಾಡಬೇಕು, ಉಳುವವನೇ ಭೂಮಿಯ ಒಡೆಯನಾಗಬೇಕು ಎಂಬ ಒಂದು ಘೋಷಣೆಯನ್ನು 1972ರಲ್ಲಿ ಹಾಕಿದರು. ನಮ್ಮ ಊರಿನಲ್ಲಿ ನಾವು ಈ ಒಂದು ಘೋಷಣೆಯನ್ನು ಪ್ರಾರಂಭ ಮಾಡಿದಾಗ ಕೆಲವರು ಉಳುವವನೇ ಭೂಮಿಯ ಒಡೆಯ ಎಂದು ಹೇಳುತ್ತಿದ್ದುದನ್ನು ನಾನು ಕೇಳಿದ್ದೇನೆ. ಮಾನ್ಯ ಮಂತ್ರಿಗಳ ಊರಿನಲ್ಲಿ ಏನು ಹೇಳುತ್ತಿದ್ದರೋ ನನಗೆ ಗೊತ್ತಿಲ್ಲ. ಉಳುವವನನ್ನೇ ಹೊಲದ ಒಡೆಯನನ್ನಾಗಿ ಮಾಡಬೇಕೆಂಬ ಉದ್ದೇಶದಿಂದ ಈ ಒಂದು ಶಾಸನವನ್ನು ತಂದರು. ಈ ಒಂದು ಶಾಸನವನ್ನು ತಂದಮೇಲೆ, ಗೇಣಿದಾರರು ಏನು ತಿಳಿದುಕೊಂಡರು ಎಂದರೆ, ಇನ್ನು ಮೇಲೆ ತಾವು ಗೇಣಿ ಕೊಡುವುದು ತಪ್ಪುತ್ತದೆ, ತಾನು ದುಡಿದದ್ದು ತನಗೇ ಸಿಗುತ್ತದೆ ಎಂದು ಈ ಒಂದು ನಂಬಿಕೆ ಅವರಲ್ಲಿ ಬಂತು. ಮುಂಬೈ ಪ್ರದೇಶದಲ್ಲಿ ಭೂಕಂದಾಯದ ಇಪ್ಪತ್ತರಷ್ಟು ಗೇಣಿ ಇದ್ದರೆ ನಮ್ಮ ರಾಜ್ಯದಲ್ಲಿ ಭೂಕಂದಾಯದ ಹತ್ತರಷ್ಟು ಗೇಣಿ ಕೊಡಬೇಕಾಗಿತ್ತು. ಮೊರಾರ್ಜಿ ದೇಸಾಯಿ ಅವರು ಮುಂಬೈನಲ್ಲಿ ಮುಖ್ಯಮಂತ್ರಿಗಳಾಗಿದ್ದಾಗ ಅಲ್ಲಿ ಒಂದು ಗುಂಟೆಗೆ 8 ಆಣೆ ಕಂದಾಯವಿತ್ತು. ಅಂದರೆ ಎಕರೆಗೆ 20 ರೂ ಗೇಣಿ ಕೊಡಬೇಕಾಗುತ್ತಿತ್ತು. ನಮ್ಮಲ್ಲಿ 5 ರೂ. ಕಂದಾಯವಿದ್ದರೆ, ಅದರ ಹತ್ತರಷ್ಟು ಎಂದರೆ 50 ರೂ ಗೇಣಿ ಕೊಡಬೇಕಾಗುತ್ತಿತ್ತು. 1974ನೇ ಇಸವಿಯಲ್ಲಿ ಗೇಣಿದಾರನೇ ಭೂಮಾಲೀಕನಾಗಬೇಕೆಂದು ಕೊಂಡು ಭೂಕಂದಾಯದ 15 ರಷ್ಟನ್ನು ಶೇಕಡಾ ನಾಲ್ಕೂವರೆ ಬಡ್ಡಿಯ ಪ್ರಕಾರ 20 ವಾರ್ಷಿಕ ಕಂತುಗಳಲ್ಲಿ ಭೂಮಾಲೀಕರಿಗೆ ಕೊಡಬೇಕೆಂದು ಶಾಸನ ಮಾಡಲಾಯಿತು. 5 ರೂ. ಕಂದಾಯವಿದ್ದರೆ, ಅದರ 150 ರಷ್ಟು ಎಂದರೆ 750 ರೂ. ಗಳನ್ನು ಶೇಕಡಾ ನಾಲ್ಕೂವರೆ ಬಡ್ಡಿ ಸೇರಿಸಿ 20 ವಾರ್ಷಿಕ ಕಂತುಗಳಲ್ಲಿ ಕೊಡುವುದಕ್ಕೆ ಅವಕಾಶವಿತ್ತು. ಈ ಲೆಕ್ಕದ ಪ್ರಕಾರ ಗೇಣಿದಾರರು ಒಂದು ಎಕರೆಗೆ 65 ರೂ. ಗಳಿಂದ 70 ರೂ. ಗಳವರೆಗೆ ವರ್ಷವೊಂದಕ್ಕೆ ಕೊಡಬೇಕಾಗಿ ಬರುತ್ತಿತ್ತು. ಆದರೆ ಈಗಿನ ಒಂದು ತಿದ್ದುಪಡಿಯ ಪ್ರಕಾರ ಗೇಣಿದಾರರು ಭೂ ಅಭಿವೃದ್ಧಿ ಬ್ಯಾಂಕ್‌ನಿಂದ ಸಾಲ ತೆಗೆದುಕೊಂಡು ಅದಕ್ಕೆ 11 ಪರ್ಸೆಂಟ್ ಬಡ್ಡಿ ಸೇರಿಸಿ 15 ವಾರ್ಷಿಕ ಕಂತುಗಳಲ್ಲಿ ಕೊಡಬೇಕಾಗುತ್ತದೆ. ಅಂದರೆ

ಈ ಮೊದಲು ವರ್ಷವೊಂದಕ್ಕೆ 70 ರೂ. ಕೊಡುವುದಿದ್ದರೆ, ಈಗ ಅದು 139 ರೂ. ಗಳಿಗೆ ಹೆಚ್ಚುತ್ತದೆ; ಅಂದರೆ ಒಂದಕ್ಕೆ ಎರಡರಷ್ಟು ಕೊಡಬೇಕು. ಈಗ ಭತ್ತದ ಲೆವಿ ದರ ಕ್ವಿಂಟಾಲ್ ಒಂದಕ್ಕೆ 79. ರೂ. ಇದೆ 139 ರೂಪಾಯಿ ಕಟ್ಟಬೇಕೆಂದರೆ ಎರಡೂವರೆ ಕ್ವಿಂಟಾಲ್ ಭತ್ತವನ್ನು ಮಾರಬೇಕು. ನಮ್ಮ ಕಡೆ 80 ಸೇರಿಗೆ ಒಂದು ಚೀಲ. ಈ ಲೆಕ್ಕದಲ್ಲಿ 3 ಚೀಲ ಭತ್ತವನ್ನು ಗೇಣಿಯ ರೂಪದಲ್ಲಿ ಸರ್ಕಾರಕ್ಕೆ ಕೊಟ್ಟಿದ್ದರೆ ಸಾಕಾಗುತ್ತಿತ್ತು. ಆದರೆ ಈಗಿನ ತಿದ್ದುಪಡಿಯ ಪ್ರಕಾರ ವರ್ಷವೊಂದಕ್ಕೆ 139 ರೂಪಾಯಿ ಕೊಡಬೇಕಾಗುತ್ತದೆ. ಇದಕ್ಕೂ ಮೊದಲು 50 ರೂಪಾಯಿ ಗೇಣಿ ಕೊಟ್ಟರೆ ಸಾಕಾಗುತ್ತಿತ್ತು. ಆದರೆ ತಾವೇ ಭೂಮಾಲೀಕರಾಗುತ್ತೇವೆನ್ನುವ ಕಾರಣದಿಂದ ಎಕರೆಯೊಂದಕ್ಕೆ ಕನಿಷ್ಠ ಪಕ್ಷ 130 ರಿಂದ 140 ರೂಪಾಯಿಗಳವರೆಗೆ ವರ್ಷವೊಂದಕ್ಕೆ ಕೊಡಬೇಕಾದ ಪ್ರಸಂಗ ಬಂದಿದೆ. ಅಂದರೆ ಇವರು ಗೇಣಿದಾರರಿಗೆ ಏನು ಒಳ್ಳೆಯದನ್ನು ಮಾಡಿದರು ? ನಮ್ಮಲ್ಲಿ ಒಂದು ಗಾದೆಯಿದೆ. ಏನೆಂದರೆ, ಹುಲಿ ಬಂತು ಎಂದು ಬಿಲ ಹೊಕ್ಕರೆ ಹಾವು ಹಿಡಿದುಕೊಂಡಿತು ಎಂದು. ಈ ಮೊದಲು ಗೇಣಿದಾರರು ತಮ್ಮ ಭೂಮಾಲೀಕರಿಗೆ ತಮ್ಮ ಕಷ್ಟವನ್ನು ಹೇಳಿಕೊಂಡರೆ ದಮ್ಮಯ್ಯ ಗುಡ್ಡೆ ಹಾಕಿದರೆ, ಗೇಣಿಯಲ್ಲಿ ಅರ್ಧವನ್ನು ಬಿಡುತ್ತಿದ್ದರು. ಆದರೆ ಈಗ ಈ ಕಾನೂನು ಜಾರಿಗೆ ಬಂದಮೇಲೆ ಸರ್ಕಾರಕ್ಕೆ ಕಟ್ಟಬೇಕಾದ ಕಂತನ್ನು ಕಟ್ಟಲೇ ಬೇಕು. ಎರಡು ವರ್ಷ ಕಂತನ್ನು ಕಟ್ಟದಿದ್ದರೆ, ಅಂತಹವರ ಜಮೀನನ್ನು ಸರ್ಕಾರದವರು ಮುಟ್ಟುಗೋಲು ಹಾಕಿಕೊಳ್ಳುತ್ತಾರೆ. ಈ ಕಾನೂನು ಜಾರಿಗೆ ಬಂದ ಮೇಲೆ ಗೇಣಿ ಕೊಡುವುದೇನೋ ನಿಂತು ಹೋಯಿತು, ಆದರೆ ಸರ್ಕಾರಕ್ಕೆ ತಪ್ಪದೆ ಕಂತನ್ನು ಕಟ್ಟಲೇ ಬೇಕಾಗಿದೆ. ಈ ಒಂದು ವ್ಯವಸ್ಥೆಯಿಂದ ಮುಂದೆ ಏನಾಗುತ್ತದೆಂದರೆ, ನಾನು ಈ ಮಾತನ್ನು ಅತ್ಯಂತ ವೇದನೆಯಿಂದ ಈ ಸದನದ ಮೂಲಕ ಹೇಳುತ್ತಿದ್ದೇನೆ, ಇನ್ನು ಹತ್ತು ವರ್ಷಗಳ ನಂತರ ಈ ಗೇಣಿದಾರರ ವಶದಲ್ಲಿರುವ ಜಮೀನೆಲ್ಲಾ ಅಂದರೆ ಸೊಸೈಟಿಯ ಪಾಲಾಗಿರುವ ಜಮೀನೆಲ್ಲಾ ಭೂಮಿ ಇದ್ದವರಿಗೆ ಹೋಗುತ್ತದೆ, ಬಡವರ ಕೈಯಲ್ಲಿ ಉಳಿಯುವುದಿಲ್ಲ ಎಂದು. ಇದು ಶಾಶ್ವತವಾದ ಮಾತು. ಇಂದು ನಮ್ಮಲ್ಲಿ ಸಣ್ಣ ಹಿಡುವಳಿದಾರರ ಲೆಕ್ಕವನ್ನು ನೋಡಿದರೆ ಅಂದರೆ ಎರಡು ಎಕರೆಗಳಿಗಿಂತ ಕಡಿಮೆ ಜಮೀನಿರುವವರ ಸಂಖ್ಯೆ ತೆಗೆದುಕೊಂಡರೆ ಶೇಕಡಾ 45 ರಷ್ಟಿದ್ದಾರೆ. ಗೇಣಿದಾರರ ಲೆಕ್ಕ ತೆಗೆದುಕೊಂಡರೆ, ಇಲ್ಲಿಯವರೆಗೆ 7 ಲಕ್ಷಕ್ಕೂ ಹೆಚ್ಚು ಗೇಣಿದಾರರು ಅರ್ಜಿಗಳನ್ನು ಹಾಕಿಕೊಂಡಿದ್ದಾರೆ. ಇವರುಗಳ ಪೈಕಿ ಶೇಕಡಾ 50 ರಷ್ಟು ಗೇಣಿದಾರರು ಅಂದರೆ 3 ಲಕ್ಷ ಗೇಣಿದಾರರು ಈ ನಿಮ್ಮ ತಿದ್ದುಪಡಿ ವ್ಯಾಪ್ತಿಯಲ್ಲಿ ಬರುತ್ತಾರೆ. ನೀವೇ ಹೇಳುವ ಪ್ರಕಾರ 2, 3, 4 ಎಕರೆ ಜಮೀನು ಇರುವವರೆಲ್ಲಾ ಸೆಕ್ಷನ್-53ರ ಕೆಳಗೆ ಬರುತ್ತಾರೆ. ಸೆಕ್ಷನ್ 53ರಲ್ಲಿ 4 ವರ್ಗದ ಜನರಿಗೆ ಪರಿಹಾರವನ್ನು ಒಂದೇ ಕಂತಿನಲ್ಲಿ ಕೊಡಬೇಕೆಂದು ಏನು ಹೇಳಿದ್ದೀರಿ, ಈ ನಾಲ್ಕು ವರ್ಗಕ್ಕೆ ಸೇರಿರತಕ್ಕಂಥ ಗೇಣಿದಾರರ ಲೆಕ್ಕ ಹಾಕಿದರೆ ನನ್ನ ಒಂದು ಅಂದಾಜಿನ ಪ್ರಕಾರ 3–4 ಲಕ್ಷ ಗೇಣಿದಾರರು ಈ ವರ್ಗಕ್ಕೆ ಸೇರುತ್ತಾರೆ.

ಎಲ್ಲರೂ ಒಂದೇ ಸಾರಿ ಎಲ್ಲಿ ಕೊಡುವುದಕ್ಕಾಗುತ್ತದೆ ಎಂದು ಭೂ ಅಭಿವೃದ್ಧಿ ಬ್ಯಾಂಕಿನಲ್ಲಿ 11 ಪರ್ಸೆಂಟಿನಂತೆ ಸಾಲ ತೆಗೆದು ಬಡ್ಡಿ ಸೇರಿಸಿ 15 ಕಂತುಗಳಲ್ಲಿ ಅದನ್ನು ವಾಪಸ್ಸು ಕೊಡಬೇಕು ಎಂದು ಮಾಡಿದರು. ಇದರಿಂದ ಬಹುಸಂಖ್ಯೆಯ ಗೇಣಿರೈತರು ಕಷ್ಟವನ್ನು ಅನುಭವಿಸಬೇಕಾಗುತ್ತದೆ. ಭೂ ಅಭಿವೃದ್ಧಿ ಬ್ಯಾಂಕು ಗೇಣಿದಾರರ ಕೈಯಲ್ಲಿ ಇಲ್ಲ. ಅದರ ಆಡಳಿತವನ್ನು ನಡೆಸತಕ್ಕ ಶಕ್ತಿ ಅವರಿಗೆ ಇಲ್ಲ. ಗೇಣಿದಾರರ ಹೆಸರಿನಲ್ಲಿ ಭೂ ಅಭಿವೃದ್ಧಿ ಬ್ಯಾಂಕನ್ನು ನಡೆಸುವುದಕ್ಕೆ ಸಾಧ್ಯವಾಗದೆ ಇರುವಂಥವರ ಕೈಯಲ್ಲಿ ಗೇಣಿದಾರರ ರಕ್ಷಣೆಯನ್ನು, ಮಾಡಬೇಕೆಂದು ಕೊಟ್ಟರೆ ಭೂಮಿಯೆಲ್ಲಾ ಅವರ ಕೈಗೆ ಹೋಗುತ್ತದೆ. ಗೇಣಿದಾರರಿಗೆ ಕೊಟ್ಟಿರುವ ಎಷ್ಟೋ ಭೂಮಿಗಳು ಮತ್ತೆ ಅವರ ಕೈತಪ್ಪಿ ಹೋಗುವಂತಹ ಸಂದರ್ಭ ಬರಬಹುದು. ಬಡಜನಗಳ ಕೈಯಲ್ಲಿ ಭೂ ಅಭಿವೃದ್ಧಿ ಬ್ಯಾಂಕಿಗೆ ಕಂತು ಕೊಡುವುದಕ್ಕೆ ಆಗದೆ ಮತ್ತೆ ಅದರ ಆಡಳಿತವನ್ನು ನಡೆಸತಕ್ಕವರ ಕೈಗೆ ಹೋದರೆ ಭೂ ಸುಧಾರಣೆ ಮಾಡಿದ್ದರ ಉದ್ದೇಶ ಏನು ಸಫಲವಾಗುತ್ತದೆ ? ಸರ್ಕಾರದವರ ಕೈಯಲ್ಲಿ ಗೇಣಿ ರೈತರು ಇದ್ದಿದ್ದರೆ ಒಂದು ಸಾರಿ ಅವನಿಗೆ ಕಂತು ಕೊಡುವುದಕ್ಕೆ ಆಗುವುದಿಲ್ಲ ಅವನಿಗೆ ತೊಂದರೆ ಬಂತು ಅಂಥಾ ಸಂದರ್ಭದಲ್ಲಿ ಅವನು ತಮ್ಮ ಪ್ರತಿನಿಧಿಗಳ ಮುಖಾಂತರ ಸರ್ಕಾರಕ್ಕೆ ಕಾಲಾವಕಾಶವನ್ನು ಕೇಳುವುದಕ್ಕೆ ಅವಕಾಶವಿತ್ತು. ಮಂತ್ರಿಗಳಿಗೆ ಒಂದು ಮನವಿಯನ್ನು ಕೊಡುವುದಕ್ಕೆ ಸಾಧ್ಯವಿತ್ತು. ಆ ರೀತಿ ಅವನು ತನ್ನ ಕಷ್ಟಸುಖಗಳನ್ನು

ಹೇಳಿಕೊಂಡಲ್ಲ ಅವನಿಗೆ ತಾನು ಕೊಡಬೇಕಾದ ಕಂತು ಕೊಡುವುದಕ್ಕೆ 3 ತಿಂಗಳೋ 6 ತಿಂಗಳೋ ಟೈಮು ತೆಗೆದುಕೊಂಡು ಅವನು ತಾನು ಕೊಡಬೇಕಾದ ಕಂತು ಕೊಡುವುದಕ್ಕೆ ಅವಕಾಶ ಇತ್ತು. ಈಗ ಆ ಜವಾಬ್ದಾರಿಯನ್ನು ಸೊಸೈಟಿಗೆ ಕೊಟ್ಟರೆ ಗೇಣಿ ರೈತ ಕಟ್ಟುನುಚ್ಚು ನೂರಾಗುತ್ತಾನೆ. ಅದಕ್ಕಾಗಿ ನಾನು ಮಾನ್ಯ ಕಂದಾಯ ಮಂತ್ರಿಗಳಲ್ಲಿ ಕಳಕಳಿಯಿಂದ ಹೇಳುವುದು ಏನೆಂದರೆ ಪರಿಹಾರವನ್ನು ಕೊಡುವುದರಲ್ಲಿ ಒಂದು ವರ್ಗದವರಿಗೆ ಒಂದು ಸೌಲಭ್ಯ ಇನ್ನೊಂದು ವರ್ಗದವರಿಗೆ ಒಂದು ಸೌಲಭ್ಯ ಈ ರೀತಿ ತಾರತಮ್ಯ ಮಾಡುವುದು ಸರಿಯಲ್ಲ. ಎರಡು ಸಾವಿರ ರೂಪಾಯಿಗಳಿಗಿಂತ ಜಾಸ್ತಿ ಪರಿಹಾರವನ್ನು ಕೊಡುವ ಸಂದರ್ಭದಲ್ಲಿ ವಿಧವೆಯವರಿಗೆ, ಅಂಗವಿಕಲರಿಗೆ, ಅಪ್ರಾಪ್ತ ವಯಸ್ಕರಿಗೆ, ವಿದ್ಯಾ ಸಂಸ್ಥೆ ಅಲ್ಲದೆ ಇತರಕ್ಕವರಿಗೆ ಸರ್ಕಾರದವರೇ ನೇರವಾಗಿ 20 ಕಂತುಗಳಲ್ಲಿ 5½ ಪರ್ಸೆಂಟ್ ಬಡ್ಡಿ ಸೇರಿಸಿ ಕೊಡುವುದಕ್ಕೆ ಅವಕಾಶ ಇದೆ. ಈ ರೀತಿ ಮಾಡಿರುವುದು ತಪ್ಪು. ಒಂದೇ ಗೇಣಿಯ ರೈತರಿಗೆ ಒಂದು ವರ್ಗದ ಗೇಣಿರೈತರಿಗೆ ಒಂದು ರೀತಿಯ ಸವಲತ್ತು, ಇನ್ನೊಂದು ವರ್ಗದ ಗೇಣಿ ರೈತರಿಗೆ ಒಂದು ತರಹ ಸವಲತ್ತು ಕೊಡುವುದು ಸರಿಯಲ್ಲ. ಇದು ಡಿಸ್‌ಕ್ರಿಮಿನೇಟ್ ಮಾಡಿದಹಾಗಾಗುತ್ತದೆ. ಈಕ್ವಿಟಿ ಬಿಫೋರ್ ಲಾ ಎಂಬ ಯಾವಾಗ ತತ್ವವನ್ನು ಒಪ್ಪಿಕೊಂಡಿದ್ದಾರೆಯೋ ಅದರ ಪ್ರಕಾರ ನಡೆದುಕೊಳ್ಳಬೇಕು ರಿಜರ್ವ್ ಬ್ಯಾಂಕಿನವರಾಗಲೀ, ಕೇಂದ್ರ ಸರ್ಕಾರದವರಾಗಲೀ ಸಹಾಯ ಮಾಡುವುದಿಲ್ಲ ಎಂದು ಹೇಳಿ ಈ ರೀತಿ ಮಾಡುವುದು ಸರಿಯಲ್ಲ. ಈಕ್ವಿಟಿ ಬಿಫೋರ್ ಲಾ ತತ್ವದ ಪ್ರಕಾರ ಎಲ್ಲಾ ಗೇಣಿದಾರರಿಗೂ ಒಂದೇ ದೃಷ್ಟಿಯಿಂದ ನೋಡಬೇಕು.

(ಶ್ರೀ ಕೆ. ಎಂ. ರುದ್ರಪ್ಪನವರು ಪೀಠವನ್ನು ಅಲಂಕರಿಸಿದವರು)

ಜಮೀನ್ದಾರರಿಗೆ ಪರಿಹಾರವನ್ನು ಕೊಡತಕ್ಕಂಥಾ ಸಂದರ್ಭದಲ್ಲಿ ಒಂದು ನಿಗದಿ ಮಾಡಿದ್ದಾರೆ. ಅವರಿಂದ ಎಷ್ಟೋ ಭೂಮಿಯನ್ನು ತೆಗೆದುಕೊಂಡರೂ ಕೂಡ 2 ಲಕ್ಷ ರೂಪಾಯಿಗಳಿಗಿಂತ ಜಾಸ್ತಿ ಪರಿಹಾರವನ್ನು ತಗೆದುಕೊಳ್ಳುವುದಕ್ಕೆ ಅವಕಾಶ ಇಲ್ಲ. ಶ್ರೀಮಾನ್ ಎಸ್. ಎಂ. ಶಿರ್ನಾಳಿ ಚಂದ್ರಶೇಖರ್ ಅವರಿಗಾಗಲಿ ಶ್ರೀಮಾನ್ ಬದರೀನಾರಾಯಣ ಅವರಿಗಾಗಲೀ ಪರಿಹಾರವನ್ನು ಕೊಡುವುದಾದರೆ ಎರಡು ಲಕ್ಷ ರೂಪಾಯಿಗಳಿಗಿಂತ ಜಾಸ್ತಿ ಪರಿಹಾರ ಕೊಡಬೇಕಾಗುತ್ತದೆ. ಆದರೆ ಸರ್ಕಾರದವರು ಕಾನೂನು ಪ್ರಕಾರ 2 ಲಕ್ಷ ರೂಪಾಯಿಗಳಿಗಿಂತ ಜಾಸ್ತಿ ಕೊಡುವುದಕ್ಕೆ ಬರುವುದಿಲ್ಲ ಆದರೆ ಅವರೇನೋ ತೆಗೆದುಕೊಳ್ಳುವುದಕ್ಕೆ ತಯಾರಾಗಿದ್ದಾರೆ. ಆದರೆ ಕೊಡುವುದಕ್ಕೆ ಬರುವುದಿಲ್ಲ. ಪರಿಹಾರವನ್ನು ಕೊಡುವುದಕ್ಕೆ 2 ಲಕ್ಷ ರೂಪಾಯಿಗಳ ಲಿಮಿಟ್ ಹಾಕಿರುವುದರಿಂದ ಜಮೀನ್ದಾರರಿಗೆ ಜಾಸ್ತಿ ಪರಿಹಾರ ಕೊಡಬೇಕಾದ್ದರಿಂದ ಉಳಿತಾಯವಾಗುವುದಿಲ್ಲವೇ ? ಮತ್ತು ಜಮೀನ್ದಾರಿಗೆ ಪರಿಹಾರವನ್ನು ಕೊಡುವಾಗ ಅವರ ಕಂತಿನ ಹಣದ ಜೊತೆಗೆ 4½ ಬಡ್ಡಿ ಸೇರಿಸಿ ಕೊಡುತ್ತಾರೆ. ಅವರಿಗೆ ಅದಕ್ಕಿಂತ ಜಾಸ್ತಿ ಕೊಡುವುದಿಲ್ಲ. 4ನೇ ವರ್ಗದವರಿಗೆ 20 ಕಂತುಗಳಲ್ಲಿ ಹಣವನ್ನು ಕೊಡುವುದಕ್ಕೆ 5½ ಪರ್ಸೆಂಟ್ ಮಾಡಿದ್ದಾರೆ. ಸರ್ಕಾರದವರು ಲಾಭ ಮಾಡಿಕೊಳ್ಳುವುದಕ್ಕಾಗಿ ಗೇಣಿದಾರರಿಂದ ಆ ರೀತಿ ವಸೂಲು ಮಾಡಬೇಕೆಂದು ಮಾಡಿದ್ದಾರೆಯೋ ? ಒಂದು ಪರ್ಸೆಂಟ್ ಜಾಸ್ತಿ ಬಡ್ಡಿಯನ್ನು ಅವರಿಂದ ತೆಗೆದುಕೊಳ್ಳತಕ್ಕ ಪ್ರಯತ್ನವನ್ನು ಪತಕ್ಕೆ ಮಾಡಿದ್ದಾರೆ ? ಅದನ್ನು ಕೈಬಿಡಬೇಕು. ಗೇಣಿ ರೈತರಿಗೆ ಸವಲತ್ತನ್ನು ಜಾಸ್ತಿ ಮಾಡಿ ಅನುಕೂಲ ಹೆಚ್ಚು ಮಾಡಿ ಅವರನ್ನು ಇನ್ನಷ್ಟು ಬಲಿಷ್ಠರನಾಗಿ ಮಾಡುವುದಕ್ಕೆ ಬದಲಾಗಿ ಈ ರೀತಿ ಬದಲಾವಣೆ ಮಾಡಿ ಗೇಣಿದಾರರಿಗೆ ಹೊರೆಯನ್ನು ಜಾಸ್ತಿ ಮಾಡಿದ್ದಾರೆ ಭೂ ಅಭಿವೃದ್ಧಿ ಬ್ಯಾಂಕಿನಿಂದ ಸಾಲ ಪಡೆದು ಅದನ್ನು ಭೂಮಾಲೀಕನಿಗೆ ಪರಿಹಾರ ಕೊಡುವುದಕ್ಕಾಗಿ ಸರ್ಕಾರಕ್ಕೆ ವ್ಯವಸ್ಥೆಯನ್ನೇನು ಮಾಡಿದ್ದಾರೆ ಅದು ಸಾಧುವಾದ ಕೆಲಸವಲ್ಲ. ಹಿಂದೆ ಹಳೆಯ ಕಾನೂನಿನಲ್ಲಿ ಯಾವರೀತಿ ಇತ್ತೋ ಅದನ್ನೆ ದಯಮಾಡಿಟ್ಟು ಇಡಬೇಕು. ಆ ರೀತಿ ಇದ್ದರೆ ತೊಂದರೆಯಾಗುವುದಿಲ್ಲ.

ಆ ಮೇಲೆ ಸೆಕ್ಷನ್ 53 ರಲ್ಲಿ ಈ ರೀತಿ ಹೇಳಿದ್ದಾರೆ.—

"(1) The amount of pr mium in respect of the land of which a tenant or sub-tenant entitled to be registered as

occupant under section 45 shall be payable to the State Government by the tenant or sub-tenant,—

(i) in a lumpsum where the amount payable under section 51—

(*a*) does not exceed two thousand rupees, or

(*b*) is payble to a minor, widow, a woman who has never been married or a person who is subject to physical or mental disability, or

(*c*) is payable to an institutions referred to in section 106,

(ii) either in a lumpsum or in instalments over a period not exceeding twenty years with interest at five and a half per cent per annum as the tenant or the sub-tenant may intimate to the Tahsildar, in other cases."

ಎಂದು ಇದೆ. 20 ವರ್ಷದ ಕಂತಿಗೆ 4 1/2 ಪರ್ಸೆಂಟ್ ಬಡ್ಡಿ ಮಾತ್ರ ಇಡಬೇಕು. ಅದಕ್ಕಿಂತ ಜಾಸ್ತಿ ಹಾಕಬಾರದು. ಅವರು ಹಣಕಾಸಿನ ತೊಂದರೆಯ ಒಂದು ದೃಷ್ಟಿಯನ್ನೇ ಹೇಳುತ್ತಾರೆ ನಾನು ಹೇಳುತ್ತೇನೆ ಕೆಲವು ವರ್ಗದ ಜಮೀನುದಾರರಿಗೆ ಪರಿಹಾರವನ್ನು ಕೊಡತಕ್ಕ ಸಂದರ್ಭದಲ್ಲಿ 10 ಕೋಟಿ ರೂಪಾಯಿಗಳನ್ನು ಕೊಡಬೇಕಾಗುತ್ತದೆ. ಆ ಹಣವನ್ನು ತರುವುದಕ್ಕೆ ಕೇಂದ್ರ ಸರ್ಕಾರದ ಮಟ್ಟದಲ್ಲಿ ಅವರ ಜೊತೆಗೆ ಹೋರಾಟ ಮಾಡುವುದಕ್ಕೆ ನಾವೂ ತಯಾರಿದ್ದೇವೆ. ಕೇಂದ್ರದ ಮಂತ್ರಿಮಂಡಲದಲ್ಲಿ ಶ್ರೀಮಾನ್ ಮುರಾರ್ಜಿ ದೇಸಾಯಿ ಅವರು ಇದ್ದಾರೆ. ಫರ್ನಾಂಡಿಸ್ ಅವರು ಇದ್ದಾರೆ. ಗೇಣಿದಾರರಿಗೆ ಹಿತವಾಗುವ ರೀತಿಯಲ್ಲಿ ಅವರು ಸಹಾಯ ಮಾಡುತ್ತಾರೆ. ಅವರು ಆ ರೀತಿ ಸಹಾಯ ಮಾಡದಿದ್ದರೆ ನಾವು ಹೋರಾಟ ಮಾಡತಕ್ಕ ಕೆಲಸವನ್ನು ಮಾಡುತ್ತೇವೆ ಎಂದು ನಾನು ಹೇಳುತ್ತೇನೆ. ಆದ್ದರಿಂದ ಈ ವಿಚಾರದಲ್ಲಿ ಹಿಂದೂ ಮುಂದೂ ನೋಡಬೇಡಿ 7 ಲಕ್ಷ ಜನ ಇರತಕ್ಕ ಗೇಣಿದಾರರಿಗೆ ಸಹಾಯ ಮಾಡುವಾಗ 10 ಕೋಟಿ ರೂಪಾಯಿಗಳಿಗಾಗಿ ಆಲೋಚನೆ ಮಾಡುವುದು ಸರಿಯಲ್ಲ ಭೂ ಅಭಿವೃದ್ಧಿ ಬ್ಯಾಂಕ್ ಗೇಣಿದಾರರಿಗೆ ಹಣವನ್ನು ಕೊಡುವಾಗ ಅವರಿಗೆ 11 ಪರ್ಸೆಂಟ್ ಬಡ್ಡಿಯನ್ನು ಹಾಕುತ್ತಾರೆ. ಈ ಭೂ ಅಭಿವೃದ್ಧಿ ಬ್ಯಾಂಕಿನವರೇನೂ ತಮ್ಮ ಸ್ವಂತ ಹಣವನ್ನು ಕೊಡುವುದಿಲ್ಲ ಅವರು ರಿಜರ್ವ್ ಬ್ಯಾಂಕಿನಿಂದ 9 ಪರ್ಸೆಂಟಿನಂತೆ ಬಡ್ಡಿ ಪ್ರಕಾರ ಈ ಭೂ ಅಭಿವೃದ್ಧಿ ಬ್ಯಾಂಕಿಗೆ ಕೊಡುತ್ತಾರೆ. ಅವರು 11 ಪರ್ಸೆಂಟಿನಂತೆ ಗೇಣಿದಾರರಿಗೆ ಕೊಡುತ್ತಾರೆ ಆದ್ದರಿಂದ ಅವರಿಗೆ 2 ಪರ್ಸೆಂಟ್ ಬಡ್ಡಿ ಉಳಿತಾಯವಾಗುತ್ತದೆ ಗೇಣಿದಾರರು ನೇರವಾಗಿ ಸರ್ಕಾರಕ್ಕೆ ಭೂಮಿಯ ಬೆಲೆಯನ್ನು 20 ಕಂತುಗಳಲ್ಲಿ 4 1/2 ಪರ್ಸೆಂಟ್ ಬಡ್ಡಿ ಪ್ರಕಾರ ಕೊಡಬೇಕೆಂದು ಮೊದಲು ಮಾಡಿದಂತಹ ಕಾನೂನಿನಲ್ಲಿ ಇತ್ತು. ಆದರೆ ಈಗ ಆ ಹಣವನ್ನು 20 ವಾರ್ಷಿಕ ಕಂತುಗಳಲ್ಲಿ 11 ಪರ್ಸೆಂಟ್ ಬಡ್ಡಿಯಂತೆ ಗೇಣಿದಾರ ಭೂ ಅಭಿವೃದ್ಧಿ ಬ್ಯಾಂಕಿಗೆ ಕೊಡಬೇಕಾಗಿದೆ. ಇದು ಗೇಣಿದಾರರಿಗೆ ಹೊರೆಯಾಗಿದೆ. ಆದ್ದರಿಂದ 4 1/2 ಪರ್ಸೆಂಟ್ ಮತ್ತು 11 ಪರ್ಸೆಂಟ್ ಮಧ್ಯೆ ಬರತಕ್ಕ ವ್ಯತ್ಯಾಸದ ಹಣ ಏನಿದೆ ಇದನ್ನು ಸರ್ಕಾರದವರೇ ವಹಿಸಿಕೊಳ್ಳಬೇಕು. ಈ ರೀತಿ ಸರ್ಕಾರದವರು ಆ ಬಡ್ಡಿ ವ್ಯತ್ಯಾಸದ ಹಣವನ್ನು ವಹಿಸಿಕೊಂಡರೆ ಅದರ ಖರ್ಚು ಒಂದೂವರೆ ಕೋಟಿ ರೂಪಾಯಿಗಳಿಗಿಂತ ಜಾಸ್ತಿ ಬರುವುದಿಲ್ಲ.

ಇದು 10 ವರ್ಷ ಆದಮೇಲೆ ಬರುತ್ತದೆ ತನ್ನ ಪಾಡಿಗೆ ಅದು ನಡೆಯುತ್ತದೆ. ಇದನ್ನು ಸರ್ಕಾರ ವಹಿಸಿಕೊಂಡು ಒಂದು–ಒಂದೂವರೆ ಕೋಟಿ ರೂಪಾಯಿಗಳನ್ನು 7 ಲಕ್ಷ ಜನರಿಗೆ ಕೊಡುವುದಕ್ಕೆ ಸರ್ಕಾರ ಹಿಂದು ಮುಂದೆ ನೋಡುವುದು ನ್ಯಾಯವಲ್ಲ. ಯಾರಿಗೆ ಒಂದು ಎಕರೆ ಎರಡು ಎಕರೆ ಕೆಳಗೆ ಇರುತ್ತದೆ ಅವರಿಗೆ ಮುಫತ್ತಾಗಿ ಭೂಮಿಯನ್ನು ಕೊಡತಕ್ಕ ಸನ್ನಿವೇಶಕ್ಕೆ'

ಸರ್ಕಾರ ಬರಬೇಕಾಗಿತ್ತು, ಆ ಕೆಲಸವನ್ನು ಮಾಡಲಿಲ್ಲ. ಎಲ್ಲವನ್ನೂ ಹಂತಹಂತವಾಗಿ ಆಲೋಚನೆ, ಸಮಾಲೋಚನೆ ಮಾಡತಕ್ಕ ಪ್ರವೃತ್ತಿಯನ್ನು ಬೆಳೆಸಿಕೊಂಡವರು ಪರಿಹಾರವನ್ನು ಉತ್ತಮ ರೀತಿಯಲ್ಲಿ ಕೊಡತಕ್ಕ ಕೆಲಸವನ್ನು ಕೈಗೊಳ್ಳಬೇಕು. You are going back, ಒಂದು ಕೈಯಲ್ಲಿ ಭೂಮಿಯನ್ನು ಕೊಟ್ಟು, ಮತ್ತೊಂದು ಕೈಯಲ್ಲಿ ಕಿತ್ತುಕೊಳ್ಳತಕ್ಕ ಕೆಲಸವನ್ನು ಮಾಡುವುದು ಬೇಡ ದಯಮಾಡಿ ಇದನ್ನು ಪರಿಶೀಲನೆ ಮಾಡಬೇಕು. ಇವತ್ತು ಸೆಂಟ್ರಲ್ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್‌ನಿಂದ 10 ಪರ್ಸೆಂಟ್ ಮಾತ್ರ ಇವರಿಗೆ ಕೊಡುತ್ತಾರೆ.

SRI H D. DEVEGOWDA.—Physically handicapped, minors and especially widows nearly 3 to 4 lakhs persons ಬರುತ್ತಾರೆ ಎಂದು ಹೇಳಿದ್ದಾರೆ. ಇವರಿಗೆ ಎರಡು, ಎರಡೂವರೆ ಲಕ್ಷ ಆಗುತ್ತದೆ. ಇಷ್ಟು ಟೋಟಲ್ ಹಣ ಲ್ಯಾಂಡ ಡೆವಲಪ್‌ಮೆಂಟ್ ಬ್ಯಾಂಕ್‌ನಿಂದ ಸಿಕ್ಕುವುದಿಲ್ಲ. ಆದುದರಿಂದ ಬೇರೆ ಯಾವುದಾದರೂ ವೆಚ್ಚವನ್ನು ಕಡಿತಮಾಡಿ ಈ ವರ್ಗದ ಜನತೆಗೆ ಕೊಡಬೇಕು; ಕೊಡುವುದಿಲ್ಲ ಎಂಬ ಸಬೂಬು ಹೇಳಕೂಡದು. You cut down non-plan expenditure ನೀವೇ ಎಲ್ಲಾ ಬೃಹಸ್ಪತಿಗಳು ಎನ್ನುವವರಿಗೆ ಸ್ಫೂರ್ತಿಯಿಂದ ನಡೆದುಕೊಂಡು ಬಂದಿದ್ದೀರಿ. ಈಗಲಾದರೂ ಯೋಚನೆಮಾಡಿ, ಎಷ್ಟೇ ಕೋಟಿಯಾಗಲೀ ಸಂಪನ್ಮೂಲ ಹುಡುಕುವುದಕ್ಕೆ ನಾವು ನೀವು ಕುಳಿತು ಯೋಚನೆ ಮಾಡೋಣ. If the government has the will to make payment surely there are hundreds of ways. ಅವರಿಗೆ ಪೇಮೆಂಟ್ ಮಾಡಬೇಕು.

ಶ್ರೀ ಕಾಗೋಡು ತಿಮ್ಮಪ್ಪ.—ಇದನ್ನು ತಾವು ದಯಮಾಡಿ ಗಮನದಲ್ಲಿಟ್ಟುಕೊಂಡು ಕೆಲಸಮಾಡಿ. ಸರ್ಕಾರ ಈ ಒಂದು ಹಣಕಾಸಿನ ಹೊರೆಯನ್ನು ದೊಡ್ಡದಾಗಿ ಇಟ್ಟುಕೊಂಡು ಆಲೋಚನೆ ಮಾಡುವುದಕ್ಕೆ ಹೋಗಬಾರದು. ಹೇಮಾವತಿ ಪ್ರಾಜೆಕ್ಟ್ ಕೃಷ್ಣ ಮೇಲ್ದಂಡೆ ಯೋಜನೆ, ಕಾಳಿಯೋಜನೆಗಳನ್ನು ಹಣ ಇಲ್ಲ ಎಂದು ಮಾಡತಕ್ಕ ಕೆಲಸವನ್ನು ಕೈಬಿಟ್ಟಿಲ್ಲ. ಅಪ್ಪರ್ ಕೃಷ್ಣ ಪ್ರಾಜೆಕ್ಟ್‌ಗೆ ವರ್ಲ್ಡ್ ಬ್ಯಾಂಕ್‌ನಿಂದ ಹಣವನ್ನು ತರೋಣ ಎಂದು ಯೋಚನೆ ಮಾಡುತ್ತಿದ್ದೀರಿ ಅದೇರೀತಿ ಇಲ್ಲೂ ಆಲೋಚನೆ ಮಾಡಬೇಕು. ರಿಜರ್ವ್ ಬ್ಯಾಂಕ್‌ನವರು ಏನೋ ಹೇಳುತ್ತಾರೆ. ಅಸಹಾಯಕತೆಯನ್ನು ತೋರಿಸುತ್ತಾರೆ ಎನ್ನುವುದು ಬೇಡ. ಈಗ ಇರುವುದನ್ನು ಕೈಬಿಟ್ಟು ಹಿಂದೆ ಏನು ಇತ್ತೋ ಅದೇರೀತಿ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ಗುಲ್ಬರ್ಗದಲ್ಲಿ ಕೆ ಎಸ್.ಆರ್.ಟಿ ಸಿಗೆ ಸಂಬಂಧಪಟ್ಟ ಒಂದು ಗೆಸ್ಟ್ ಹೌಸ್‌ಗೆ 15 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಮಾಳಿಗೆಯನ್ನು ಕಟ್ಟಲೇಬೇಕು ಎಂದು ಮಂತ್ರಿಗಳು ಆದೇಶವನ್ನು ಕೊಟ್ಟಿದ್ದಾರೆ. ಅಶೋಕ ಹೋಟಲನ್ನು ಎಕ್ಸ್‌ಟೆನ್‌ಷನ್ ಮಾಡುವುದಕ್ಕೆ ಹೊರಟಿದ್ದಾರೆ ಅದಕ್ಕೆ ಹಣ ಸಿಕ್ಕುತ್ತದೆ, ಇದಕ್ಕೆ ಹಣ ಸಿಕ್ಕುವುದಿಲ್ಲ. ಮಾನ್ಯ ಮಂತ್ರಿಗಳಾದ ಪ್ರಭಾಕರ್‌ರವರು ನಿನ್ನೆ ಮಾತನಾಡಿದರು. ಆಗ ಹೇಳಿದ್ದು ಜ್ಞಾಪಕವಿದೆ. ಹರಿಜನ ಡೆವಲಪ್‌ಮೆಂಟ್ ಕಾರ್ಪೊರೇಷನ್‌ಗೆ ಕೊಟ್ಟಿರುವ ಹಣವನ್ನು ಖರ್ಚುಮಾಡದೇ ಬ್ಯಾಂಕಿನಲ್ಲಿಟ್ಟುಕೊಂಡು ಬಡ್ಡಿಗೆ ಎದುರು ನೋಡುತ್ತಿದ್ದಾರೆ. ಆದುದರಿಂದ ತಾವು ದಯಮಾಡಿ ಆಲೋಚನೆಮಾಡಿ.

ಶ್ರೀ ಕೆ. ಪ್ರಭಾಕರ್.—ಅದು ಕೊಳೆಯುವ ಹಣ ಅಲ್ಲ, ಬೆಳೆಯುವ ಹಣ. Keeping the interest of every village in view their quota is assured. Nearly Rs. 18 lakhs has been paid till now. ಆದುದರಿಂದ ಆ ಹಣ ಸುಭದ್ರವಾಗಿ, ಸುವ್ಯವಸ್ಥಿತವಾಗಿ ಖರ್ಚಾಗುತ್ತಾ ಇದೆ, ಅದು ಕೊಳೆಯುವ ಹಣ ಅಲ್ಲ, ಬೆಳೆಯುವ ಹಣ.

ಶ್ರೀ ಕಾಗೋಡು ತಿಮ್ಮಪ್ಪ.—ಗೇಣೀ ಶಾಸನ ಜಾರಿಗೆ ಬಂದ ಮೇಲೆ ಗೇಣಿ ಕೊಡುವುದು ತಪ್ಪುತ್ತದೆ ಎಂದು ನಾವು ತಿಳಿದುಕೊಂಡಿದ್ದೆವು. ಹಿಂದಿನ ಇನಾಮಾಬಾಲಿಷನ್ ಆಕ್ಟ್‌ನಲ್ಲಿದ್ದಂಥಾ ಪದವನ್ನು ತೆಗೆದು ಇಲ್ಲಿ ಸೇರಿಸಿದರು. ಆ ಪದವನ್ನು ತೆಗೆಯಬೇಕು ಎಂದು ಕೇಳಿದೆ. ಭೂಸುಧಾರಣೆ ಕಾಯಿದೆ ತಂದು ಈಗ ಸರ್ಕಾರಕ್ಕೆ ಜಮೀನು ವೆಸ್ಟ್ ಆದಮೇಲೆ ಗೇಣಿಯನ್ನು ಸರ್ಕಾರಕ್ಕೆ ಕೊಡಬೇಕಂತೆ ಶಿವಮೊಗ್ಗ, ನಾರ್ತ್ ಕೆನರಾ ಜಿಲ್ಲೆಗಳಲ್ಲಿ They have already issued demand for collection of rent.

ಶ್ರೀ ಕೋಣಂದೂರು ಲಿಂಗಪ್ಪ.—ಮೊನ್ನೆ ಚುನಾವಣಾ ಕಾಲದಲ್ಲಿ ಹೋಗಿ ಇಷ್ಯೂ ಮಾಡ ಬೇಡಿ ಎಂದು ಹೇಳಿ ಬಂದಿದ್ದಾರೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಹುಟ್ಟಿಸಿಕೊಂಡು ಹೇಳುತ್ತಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ಇದರ ಬಗ್ಗೆ ಸರ್ಕ್ಯುಲರ್ ಇಷ್ಯೂ ಮಾಡಿದ್ದಾರೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ತಿದ್ದುಪಡಿಯನ್ನು ನೋಡಿ ಹೇಳಿ.

SRI KAGODU THIMMAPPA.—Collection of rent will vertually go against the very basic principle of Land Reforms Act ಇವತ್ತಿನವರೆಗೆ ಜಮೀನಿನ ಕ್ಲಾಸಿಫಿಕೇಷನ್ ಮಾಡದೇ ಹೆಚ್ಚುವರಿ ಜಮೀನನ್ನು ತೆಗೆದು ಕೊಳ್ಳತಕ್ಕ ಕೆಲಸವನ್ನು ಮಾಡದೇ ಕುಳಿತಿದ್ದೀರಿ. ಶಿವಮೊಗ್ಗ ಸಕ್ಕರೆ ಕಾರ್ಖಾನೆ ಮಾಲೀಕರ ಜಮೀನು ಇದೆ, ಅದನ್ನು ತೆಗೆದು ಕೊಳ್ಳತಕ್ಕ ಕೆಲಸವನ್ನು ಈ ಸರ್ಕಾರ ಮಾಡಲಿಲ್ಲ. ಮಂಡ್ಯ ಸಕ್ಕರೆ ಕಾರ್ಖಾನೆ ಮಾಲೀಕರ ಜಮೀನನ್ನು ತೆಗೆದುಕೊಳ್ಳುವುದಕ್ಕೆ ಆಗಲಿಲ್ಲ, ಇವತ್ತು ಭೂಸುಧಾರಣೆಯನ್ನು ಮಾಡಿದ್ದೇವೆ ಎಂದು ಹೇಳುತ್ತಿದ್ದೀರಿ. ಈ ಕೆಲಸವನ್ನು ನ್ಯೂಕ್ಲಿಯರ್ ಮಾಡಿದ ಹಾಗೆ ಎಂದು ತಿಳಿದುಕೊಂಡು ಹೋಗಬೇಡಿ. ಇದರಲ್ಲಿ ದೊಡ್ಡ, ಸೈನ್ಸ್, ಟೆಕ್ನಾಲಜಿ ಏನು ತಿಳಿದುಕೊಂಡಿದ್ದಾರೋ ಗೊತ್ತಿಲ್ಲ. ಸರ್ಕ್ಯುಲರ್ ಹೊರಡಿಸಿ ಇಲ್ಲಿ ಕುಳಿತು ಕೊಂಡು ರಿವ್ಯೂ ಮಾಡುತ್ತಾರೆ ಕಂಟ್ರೋಲ್ ಮಾಡುತ್ತಾರೆ ಎಂದು ಹೇಳಿದರೆ ಕೆಲಸ ಆಗುವುದಿಲ್ಲ. ಭೂಸುಧಾರಣಾ ಕಾನೂನನ್ನು ತಂದು ಸಿಬ್ಬಂದಿವರ್ಗಕ್ಕೆ ಸವಲತ್ತನ್ನು ಕೊಡುವುದರಲ್ಲಿ ವರ್ಷಾನುಗಟ್ಟಲೆ ಕಳೆದರೆ ಇಲಾಖೆಯ ವರು ಏನು ಮಾಡುತ್ತಾರೋ ನನಗಂತೂ ಅರ್ಥವಾಗುವು ದಿಲ್ಲ. ಆದುದರಿಂದ ಈ ತಿದ್ದುಪಡಿಯಲ್ಲಿ ಇರುವುದನ್ನು ಬಿಟ್ಟು, ಹಳೇ ಕಾನೂನನ್ನು ಇಡಬೇಕು ಎಂದು ಒತ್ತಾಯಪಡಿಸಿ, ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

12-30 P.M.

†ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್ (ಹೊಸನಗರ),—ಮಾನ್ಯ ಅಧ್ಯಕ್ಷರೆ, ಮಾನ್ಯ ಕಂದಾಯ ಸಚಿವರು ಈಗ ತಂದಿರತಕ್ಕಂಥ ಬಿಲ್ಲಿನ ಬಗ್ಗೆ ನಾನು ಹಿಂದೆ ಒಂದು ಪ್ರಶ್ನೆಯನ್ನು ಕಳುಹಿಸಿದ್ದೆ. ನನ್ನ ಪ್ರಶ್ನೆಗೆ ಉತ್ತರಿಸಿದ ದಿನದಂದು ಮಾನ್ಯ ಕಂದಾಯ ಸಚಿವರು ಆರೋಗ್ಯವಾಗಿ ರಲಿಲ್ಲವೆಂದು ಕಾಣುತ್ತದೆ ಬಹುಶಃ ಬೇರೆ ಸಚಿವರು ನನ್ನ ಪ್ರಶ್ನೆಗೆ ಉತ್ತರ ಕೊಡುವ ಜವಾಬ್ದಾರಿ ಯನ್ನು ವಹಿಸಿದರು ಆದರೂ ಆ ನನ್ನ ಪ್ರಶ್ನೆ ಓವರ್ ಆಯಿತು. ನಾನು ನೇರವಾಗಿ ಒಂದು ಪ್ರಶ್ನೆ ಯನ್ನು ಅಂದು ಹಾಕಿದ್ದೆ. ಇವತ್ತೂ ನೀವು ಹೊರಡಿಸಿರತಕ್ಕ ಆರ್ಡಿನನ್ಸ್ ಪ್ರಕಾರ ರೈತರಿಗೆ ನೀವು ಕೊಡುವುದು —4½ ಪರ್ಸೆಂಟ್ ಬಡ್ಡಿ ಆದರೆ 11 ಪರ್ಸೆಂಟಿನಂತೆ ಅವನು ಬಡ್ಡಿ ಕೊಡಬೇಕು ಆದರೆ ಪಿ.ಎಲ್.ಡಿ. ಬ್ಯಾಂಕಿನಿಂದ ತೆಗೆದುಕೊಂಡಂತಹ ಚೆಕ್ಕಾದರೂ ನೇರವಾಗಿ ಭೂಮಾಲೀಕನ ಹೆಸರಿಗಾದರೂ ಹೋಗುತ್ತದೆ ಎಂದರೆ ಅದೂ ಕೂಡ ಭೂಮಾಲೀಕನ ಹೆಸರಿಗೆ ಹೋಗುವುದಿಲ್ಲ. ಅದು ನೇರವಾಗಿ ತಹಸೀಲ್ದಾರ್‌ರವರಿಗೆ ತಲುಪುತ್ತದೆ. ಇದರಿಂದ ಅವನೇನಾದರೂ ಭೂಮಾಲೀಕ ನಿಂದ ಪರಿಹಾರ ಸಿಕ್ಕಿತು ಎಂಬ ತೃಪ್ತಿಯಿಲ್ಲ, ಆದ್ದರಿಂದ ನಿಜವಾಗಿ ಗೇಣಿದಾರ ತಾನು ಕೊಡ ಬೇಕಾದ 4½ಪರ್ಸೆಂಟ್ ಬಡ್ಡಿಗೆ ಬದಲಾಗಿ 11 ಪರ್ಸೆಂಟ್ ಬಡ್ಡಿ ಕೊಡುವುದು ತಪ್ಪಿಲ್ಲ ಗೇಣಿ ದಾರರು 7 ಪರ್ಸೆಂಟ್ ಬಡ್ಡಿ ಜಾಸ್ತಿ ಕೊಡಬೇಕೆಂಬ ಶಾಪ ನಮ್ಮ ಕಡೆ ಇನ್ನೂ ತಪ್ಪಿಲ್ಲ. ಇದರಿಂದ ಎರಡು ಕಡೆಯವರೂ ಕೂಡ ನೇರವಾಗಿ ನಮ್ಮ ಮೇಲೆ ಹಾಗೂ ನಮ್ಮ ಸರ್ಕಾರದ ಮೇಲೆ ಅಪಾದನೆ ಮಾಡುವುದನ್ನು ಇನ್ನೂ ಬಿಟ್ಟಿಲ್ಲ. ನನ್ನನ್ನು ಅನೇಕ ಭೂಮಾಲೀಕರು ಹಾಗೂ ಬಡ ಜನರು ಪಿ.ಎಲ್.ಡಿ ಬ್ಯಾಂಕಿನಿಂದ ತೆಗೆದುಕೊಂಡಂತಹ ಸಾಲವನ್ನು ನೇರವಾಗಿ ತಹಸೀಲ್ದಾರರೇ ತೆಗೆದುಕೊಳ್ಳುತ್ತಿದ್ದಾರೆ. ಆದಕಾರಣ ನಮಗೆ ಮುಂದೆ ಯಾವಾಗ ಪರಿಹಾರ ಬರುತ್ತದೆ ಎಂಬು ದಾಗಿ ಕೇಳಿದ್ದಾರೆ. I dont know why we are creating this dead capital in the Government, we are getting curse from both sides, from the landlords as well as from the tenants. ನಮ್ಮ ಯೋಜನೆ ಪ್ರಕಾರ ಅವರಿಗೆ ಇಂತಹ ಪರಿಹಾರ ಕೊಡಲು ಏಕೆ ಯೋಚನೆ ಮಾಡಿದರೋ ನನಗಂತೂ ಅರ್ಥವಾಗುತ್ತಿಲ್ಲ. ಸುಮಾರು 35

ಕೋಟಿ ರೂಪಾಯಿಗಳಷ್ಟು ಹಣ ಇಡೀ ರಾಜ್ಯಕ್ಕೆ ಪರಿಹಾರ ಕೊಡಬೇಕಾಗಬಹುದು. ಅಬ ಬ್ಬಾ ಅಂದರೆ ಅಷ್ಟು ಆಗಬಹುದೆಂದು ನನ್ನ ಊಹೆ. ಇನ್ನೂ ಈ ರಾಜ್ಯದ ಎನ್.ಜಿ.ಓ ಗಳಿಗೆ ಹಣ ಕೊಟ್ಟಿದ್ದೇವೆ, ಅದಕ್ಕಾಗಿ 60-70 ಕೋಟಿ ರೂಪಾಯಿಗಳಾಯಿತು, ಆದರೆ ಈಗ 35 ಕೋಟಿ ರೂಪಾಯಿಗಳಷ್ಟು ಹಣ ಈಗ ಅವರಿಗೆ ಪರಿಹಾರ ಕೊಡುವುದಕ್ಕಾಗುವುದಿಲ್ಲವೆಂಬುದಾಗಿ ಹೇಳಿರುವುದು ನನಗೆ ಅರ್ಥವಾಗುತ್ತಿಲ್ಲ. ನನಗೆ ಸುಮಾರು ಐದಾರು ತಿಂಗಳುಗಳಿಂದ ಸಣ್ಣ ಪುಟ್ಟ ಹಿಡುವಳಿದಾರರಿಂದ ಕಾಗದ ಪತ್ರಗಳು ಬರುತ್ತಿವೆ. ಆದರೆ ಸಣ್ಣಪುಟ್ಟ ಹಿಡುವಳಿದಾರರು ಹೇಳತಕ್ಕಂಥ ವಿಷಯಗಳನ್ನು ನೋಡಿದರೆ ನಮಗೆ ಆಶ್ಚರ್ಯವಾಗುತ್ತದೆ, ಅವರು ಒಂದು ಹೊತ್ತಿಗೆ ಇದ್ದರೆ, ಇನ್ನೊಂದು ಹೊತ್ತಿಗೆ ಊಟವಿಲ್ಲದೆ ಕೇವಲ ನೀರು ಕುಡಿದ ಕೊಂಡು ಇರುವಂತಹ ಪರಿಸ್ಥಿತಿ ಬಂದಿದೆ ಯೆಂದು ಹೇಳುತ್ತಿದ್ದಾರೆ. ಇಂತಹವರಿಗೆ ಯಾವಾಗ ಪರಿಹಾರ ಕೊಡುತ್ತೀರಿ ಯಾವಾಗ ನ್ಯಾಯ ದೊರಕಿಸಿಕೊಡುತ್ತೀರಿ ಎಂಬುದಾಗಿ ಅನೇಕ ಭೂಮಾಲೀಕರು ಕೇಳುತ್ತಿದ್ದಾರೆ. ಈ ಸಮಸ್ಯೆಯ ಬಗ್ಗೆ ಒಂದು ಗಾದೆಯನ್ನು ಈ ಸಂದರ್ಭದಲ್ಲಿ ಹೇಳಬಹುದು, ಕುರ್ಚಿ ಮೇಲೆ ಒಂದು ಖಡ್ಗವನ್ನು ನೇತು ಹಾಕಿದಾಗ ಯಾರಾದರೂ ಒಬ್ಬ ವ್ಯಕ್ತಿ ಕುರ್ಚಿಯ ಮೇಲೆ ಕುಳಿತುಕೊಂಡು ಕೆಲಸ ಮಾಡುವಾಗ ಅದು ಯಾವಾಗ ಬೀಳುತ್ತದೋ ಗೊತ್ತಿಲ್ಲ ಎಂಬಂತೆ ಈ ಸಮಸ್ಯೆಯಾಗಿದೆ ಇದು ಪಕ್ಷ, ಪ್ರತಿ ಪಕ್ಷದ ಪ್ರಶ್ನೆಯಲ್ಲ. ಇದು ಜಮೀನಿನ ಪ್ರಶ್ನೆಯೆಂಬುದಾಗಿ ನನಗೆ ಕಂಡುಬರುತ್ತದೆ. ರೈತ ತಾನು ಬೆಳೆದ ಮೇಲೆ ಅವನಿಗೂ ಕೂಡ ಸರ್ಕಾರ ಸಾಕಷ್ಟು ಪರಿಹಾರ ಕೊಡಬೇಕಾಗುತ್ತದೆ. ಒಂದು ವೇಳೆ ರೈತನಾದವನು ಗೇಣಿ ಕೊಡುವುದು ತಪ್ಪಿದರೆ ಪ್ರತಿ ಗೇಣಿ ಕೊಡಬೇಕಾಗಿಲ್ಲವೆಂಬುದನ್ನು ತಿಳಿದು ಅವನಲ್ಲಿದ್ದ ಹಣವನ್ನೆಲ್ಲಾ ಖರ್ಚು ಮಾಡಿಕೊಂಡು ಹೋಗುತ್ತಿದ್ದರೆ ನಾಳೆ ಅವನಿಗೆ ಪರಿಹಾರ ಕೊಡತಕ್ಕಂಥ ಪರಿಸ್ಥಿತಿ ಬಂದೀತೆಂದು, ಸರ್ಕಾರ ಮುಂದೆ ಕೇಳಬಹುದು ಎಂಬ ಪರಿಸ್ಥಿತಿ ಇನ್ನೂ ಬೆಳವಣಿಗೆಯಾಗಿಲ್ಲ. ರೈತರಿಗೆ ಗೊತ್ತಿಲ್ಲ. ಇದಕ್ಕೆ ಕಾರಣ, ಕೆಳ ಹಂತದಲ್ಲಿ ಕೆಲಸ ಮಾಡುತ್ತಿರುವ ಅಧಿಕಾರಿಗಳು ಇದರ ಬಗ್ಗೆ ಸಾಕಷ್ಟು ಪ್ರಚಾರ ಮಾಡಿಲ್ಲ ಎಷ್ಟೋ ಜನರಿಗೆ ಇದನ್ನು 20 ಕಂತುಗಳಲ್ಲಿ ಕೊಡಬೇಕು ಎನ್ನತಕ್ಕಂಥಾದ್ದು ಕೂಡ ಗೊತ್ತಿಲ್ಲ. ಅಂತಹವರಿಗೆ ಪಟ್ಟಾ ಕೊಡುತ್ತಾರೆ ಅಂತಹವರು ಕಂತು ರೂಪದಲ್ಲಿ ಗೇಣಿಯನ್ನು ಕೊಡಬೇಕೆಂಬುದು ಸಹ ಗೊತ್ತಿಲ್ಲ. ಅದನ್ನು ಖರ್ಚು ಮಾಡಬೇಕೇ ಅಥವಾ ಹಾಗೆಯೇ ಇಡಬೇಕೆಂಬ ಪ್ರವೃತ್ತಿ ಸಹ ಬರಲಿಲ್ಲ ಪಿ.ಎಲ್.ಡಿ ಬ್ಯಾಂಕಿನಲ್ಲಿ ಅಂತಹವರು ಸಹ ಸಾಲ ಮಾಡಿದ್ದಾರೆ. ಆ ರೀತಿ ಸಾಲ ಮಾಡಿದ ಮೇಲೆ ಪಿ.ಎಲ್.ಡಿ. ಬ್ಯಾಂಕಿನವರು ಆ ಸಾಲವನ್ನು ತೀರಿಸದಿದ್ದರೆ ಸುಮ್ಮನೆ ಇರುತ್ತಾರೆಯೇ? ಇಂದಲ್ಲ, ನಾಳೆ ಆ ಸಾಲವನ್ನು ಅವರು ಕೊಡಲೇ ಬೇಕು ಇಲ್ಲದಿದ್ದರೆ ಮನೆ ಜಫ್ತಿ ಮಾಡುತ್ತಾರೆ. ಖಾಸಗಿ ವ್ಯಕ್ತಿಗಳಿಂದ ತೆಗೆದುಕೊಂಡ ಸಾಲವನ್ನು ವಸೂಲು ಮಾಡುವುದು ಸ್ವಲ್ಪ ಮಟ್ಟಿಗೆ ಕಷ್ಟವಾಗಬಹುದು. ಆದರೆ ಸರ್ಕಾರಿ ಸಾಲವನ್ನು ವಸೂಲು ಮಾಡುವುದು ಅಷ್ಟು ಕಷ್ಟವಾಗುವುದಿಲ್ಲ. ಈ ದೃಷ್ಟಿಯಿಂದ ನಾನು ಮಾನ್ಯ ಕಂದಾಯ ಮಂತ್ರಿಗಳನ್ನು ಕೈಮುಗಿದು ಕೇಳಿಕೊಳ್ಳುವುದೇನೆಂದರೆ ಆದಷ್ಟು ಬೇಗ ಈ ಪರಿಹಾರವನ್ನು ನೇರವಾಗಿ ಅವರಿಗೆ ಕೊಡುವ ಬಗ್ಗೆ ಒಂದೇ ಹಂತದಲ್ಲಿ ತೀರ್ಮಾನ ಕೈಗೊಳ್ಳಬೇಕೆಂದ ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ೧

ಇನ್ನೊಂದರ ವಿಷಯ. ರೈತರನ್ನು $4\frac{1}{2}$ ಪರ್ಸೆಂಟ್ ಬಡ್ಡಿ ತೆತ್ತು 20 ಕಂತುಗಳಲ್ಲಿ ಸಾಲ ವಾಪಸು ಮಾಡಬೇಕೆಂದು ತೀರ್ಮಾನ ಮಾಡಿದರೆ ಸಾಕು; ಪಿ.ಎಲ್.ಡಿ ಬ್ಯಾಂಕಿನಿಂದ ಅವರು ತಂದ ಸಾಲಕ್ಕೆ 11 ಪರ್ಸೆಂಟ್‌ನಂತೆ ಬಡ್ಡಿ ತೆರಬೇಕಾದುದು ಯಾವ ನ್ಯಾಯ? ಇದು ಬಹಳ ಕಷ್ಟ ಮಂತ್ರಿಗಳು ತಿಳಿದವರು, ದೊಡ್ಡವರು, ಸುಶಿತರಾಗಿರುವುದರಿಂದ ಇದನ್ನು ಅರ್ಥಮಾಡಿಕೊಳ್ಳಬೇಕು, We are neither here nor there ನಮಗೆ ರೈತರೂ ಬೇಕು ಭೂಮಾಲೀಕರೂ ಬೇಕು. ಈಗ ಇಬ್ಬರೂ ಬೇಡವೆಂದರೆ ಹೇಗೆ? ಸಾಗರ ತಾಲ್ಲೂಕಿನಲ್ಲಿ ಒಂದು ಸಾರಿ ಸಣ್ಣ ಹಿಡುವಳಿದಾರರೆಲ್ಲರೂ ಸೇರಿ ಒಂದು ಸಭೆಯನ್ನು ಕರೆದಿದ್ದರು. ಅದರ ಬಗ್ಗೆ ಪತ್ರಿಕೆ ಅಚ್ಚು ಹಾಕಿಸಿ ಈ ತರಹಾ ಸರ್ಕಾರ ಮಾಡುತ್ತಾ ಹೋದರೆ ನಮಗೆ ಬಹಳ ಕಷ್ಟವೆಂದು ಹೇಳಿದಾಗ ನಾವು ಅವರಿಗೆ ಉತ್ತರ ಕೊಟ್ಟು ಮಾತನಾಡಲು ಆಗಲಿಲ್ಲ. ಒಟ್ಟಿನಲ್ಲಿ ನಮಗೆ ತೊಂದರೆಯಾಗದ ಹಾಗೆ ಸಹಾಯ ಮಾಡಬೇಕೆಂದು ಕೇಳಿದರು. ನಿಜವಾಗಿಯೂ ಈ ಎರಡು ವರ್ಗಗಳ ಜನರಿಗೆ ಸರ್ಕಾರ ಸಹಾಯ ಮಾಡಬೇಕೆಂದು ಹೇಳುವುದಾದರೆ ಬಡ್ಡಿಯಲ್ಲಿ $\frac{1}{2}$ ಅಂಶವಾದರೂ ರಿಯಾಯಿತಿ ಮಾಡಿ ಕೊಡಬೇಕೆಂದು ಹೇಳುತ್ತೇನೆ. ಆ ರೀತಿ ತೀರ್ಮಾನ ಮಾಡಿ ಕಡಿಮೆ ಬಡ್ಡಿ ದರದಲ್ಲಿ ಅವರಿಂದ ಸಾಲ ವಸೂಲು

ಮಾಡಿದರೆ ನಮಗೆ ಖಂಡಿತವಾಗಿ ಈ ಎರಡು ವರ್ಗಗಳವರಿಂದಲೂ ಗೌರವ ಸಿಕ್ಕುತ್ತದೆ. ಏಕೆಂದರೆ ಎಲ್ಲಿ ನೋಡಿದರೂ ಒಳ್ಳೆಯ ಮಾತುಗಳು ಅಲ್ಲಿ ಬರುತ್ತಿಲ್ಲ. ಮೊನ್ನೆ ಒಂದು ಕಾರ್ಯಕ್ರಮ ನಡೆಯಿತು. ಅದು ಪಿ.ಎಲ್.ಡಿ. ಬ್ಯಾಂಕಿನಲ್ಲಿ ಚೆಕ್ ವಿತರಣೆ ಸಮಾರಂಭ. ಆ ಕಾರ್ಯಕ್ರಮಕ್ಕೆ ಸಂಬಂಧಪಟ್ಟ ಶಾಸಕರು ಅಧ್ಯಕ್ಷತೆ ವಹಿಸಬೇಕೆಂದು ಕೇಳಿದರು, ಆ ರೀತಿಯಾಗಿ ಚೆಕ್ ವಿತರಣೆಯಾಗುವಾಗ ಕೆಲವು ಭೂಮಾಲೀಕರು ಇವತ್ತು ನಮಗೂ ಪರಿಹಾರ ಸಿಕ್ಕುತ್ತದೆಂದು ಕೋಟು ಹಾಕಿಕೊಂಡು ಬಂದಿದ್ದರು ಅವರ ಹೆಸರಿಗೆ ಚೆಕ್ ಬರೆದರು, ಆದರೆ ಅದನ್ನು ನೇರವಾಗಿ ತಹಸೀಲ್ದಾರರವರು ತೆಗೆದುಕೊಂಡರು. ಇದರಿಂದ ಪುಸ್ತಕದ ಜಮಾ ಖರ್ಚು ಲೆಕ್ಕದಲ್ಲಿ ಸರಸ್ವತಿ ಪ್ರಸನ್ನ ಆಗುವುದಕ್ಕೆ ಬದಲು ಲಕ್ಷ್ಮಿ ಪ್ರಸನ್ನವಾದರೆ ಆಗ ಉಭಯ ಪಕ್ಷದವರೂ ತೀರ್ಮಾನ ಮಾಡಿಕೊಳ್ಳುತ್ತಾರೆ. ಜೊತೆಗೆ ಮಾನ್ಯ ಶ್ರೀ ಕಾಗೋಡು ತಿಮ್ಮಪ್ಪನವರು ಮಾತನಾಡುವಾಗ ಅನಾವಶ್ಯಕವಾಗಿ ನನ್ನ ಗಮನವನ್ನು ಸೆಳೆದರು, ನಾನು ಅದಕ್ಕೆ ಉತ್ತರಕೊಡದಿದ್ದರೆ ಸರಿ ಹೋಗುವುದಿಲ್ಲ. ಉತ್ತರ ಕೊಡಬೇಕು, otherwise I will be a silent witness.

ಶ್ರೀ ಬಿ. ಎನ್. ಪಾಟೀಲ್.—ನಿಮ್ಮಲ್ಲಿ ಮ್ಯಾಗ್ನೆಟಿಕ್ ಪವರ್ ಇದೆಯೆಂದು ನಿಮ್ಮ ಗಮನವನ್ನು ಸೆಳೆದರು.

ಶ್ರೀ ಎಸ್. ಎಂ. ಶಿರಾಳಿ ಚಂದ್ರಶೇಖರ್.—ನಾವು ಚುನಾವಣೆ ಸಂದರ್ಭದಲ್ಲಿ ನೇರವಾಗಿ ಸಮಾಜವಾದವನ್ನೇ ಹೇಳಿಕೊಂಡು ಬಂದಿದ್ದೇವೆ. ಸಮಾಜವಾದವನ್ನು ಈ ದೇಶದಲ್ಲಿ ಜಾರಿಗೆ ತರುವುದಾದರೆ ಅದು ಕಾಂಗ್ರೆಸ್ಸಿನಿಂದ ಮಾತ್ರ ಸಾಧ್ಯವೆಂದು ಈಗಾಗಲೇ ಈ ದೇಶಕ್ಕೆ ಮನವರಿಕೆ ಮಾಡಿಕೊಟ್ಟಿದ್ದೇವೆ. ನಮ್ಮ ಮಿತ್ರರೂ ಸಹ ಅದೇ ರೀತಿ ಹೇಳುತ್ತಾರೆ ವ್ಯಕ್ತಿ ಸ್ವಾತಂತ್ರ್ಯವನ್ನೂ ಹಾಗೂ ಹಕ್ಕು ಬಾಧ್ಯತೆಯನ್ನು ನಮಗೆ ಕೊಡಬೇಕೆಂದು ಕೆಲವರು ಹೇಳಿದರು, ಮಾನ್ಯ ಶ್ರೀ ಕಾಗೋಡು ತಿಮ್ಮಪ್ಪನವರು ಹಾಗೂ ಶ್ರೀ ಕೋಣಂದೂರು ಲಿಂಗಪ್ಪನವರು ಸಮಾಜವಾದದ ಮಂತ್ರವನ್ನು ಹೇಳಿಕೊಂಡು ಬಂದು ಇವತ್ತು ಈ ದೇಶದಲ್ಲಿ ಜಾತೀಯತೆಯ ಬಿಡುಗನ್ನು ಉಂಟು ಮಾಡಲು ಹೊರಟಿರುವ ಹಾಗೆ ಕಾಣುತ್ತದೆ. ಸಮಾಜವಾದದ ತತ್ವವನ್ನು ಪರಿಪಾಲನೆ ಮಾಡುತ್ತಿರುವ ಕಾಂಗ್ರೆಸ್ ಪಕ್ಷಕ್ಕೆ ನೀವು ಬನ್ನಿ ಎಂದು ಹೇಳಿದರೂ ನೀವು ಬರಲಿಲ್ಲವೆಂದು ಇವತ್ತು ಯಾವ ಬಾಯಿಯಿಂದ ಈ ರೀತಿ ಅವರು ಹೇಳಿದರೋ ಅದು ತಪ್ಪು. ನಿಮಗೆ ರೈತರ ಪರವಾಗಿ ಮಾತನಾಡುವ ಹಕ್ಕು ಇಲ್ಲ. ಅದನ್ನು ಕಳೆದುಕೊಂಡಿದ್ದೀರಿ ಎಂಬುದಾಗಿ ನಮಗೆ ಹೇಳಬೇಕಾಗಿತ್ತು. ಏಕೆಂದರೆ ರೈತರ ಪರವಾಗಿ ಮಾತನಾಡುವ ಹಕ್ಕು ಎಲ್ಲ ಪಕ್ಷಗಳಿಗೂ ಇರಬಹುದು, ಆದರೆ ಆ ಹಕ್ಕು ನಮಗಂತೂ ಖಂಡಿತ ಇಲ್ಲ ಎಂದು ಪುನ ನಮಗೆ ಅವರ ಹೇಳಬಾರದು.

ಕೊನೆಯದಾಗಿ ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಟಿ. ಎಂ. ಮಂಜುನಾಥ್ (ತಿಪಟೂರು).—ಮಾನ್ಯ ಅಧ್ಯಕ್ಷರೇ, ಮಾನ್ಯ ಕಂದಾಯ ಮಂತ್ರಿಗಳು ತಂದಿರತಕ್ಕಂಥ ತಿದ್ದುಪಡಿ ಕಾನೂನಿಗೆ ನಾನು ಸಂಪೂರ್ಣವಾದ ಒಪ್ಪಿಗೆಯನ್ನು ವ್ಯಕ್ತಪಡಿಸಿ ಕೆಲವು ಮಾತುಗಳನ್ನು ಹೇಳಲಪ್ಪಪಡುತ್ತೇನೆ. ಕಾಂಗ್ರೆಸ್ ಸರ್ಕಾರ ಬಂದ ಮೇಲೆ ಚುನಾವಣೆ ಪ್ರಣಾಳಿಕೆಯ ಪ್ರಕಾರ ಕೊಟ್ಟ ಆಶ್ವಾಸನೆಗಳಲ್ಲಿ ಏನು ಸಾಧನೆ ಮಾಡಿದ್ದಾರೆಂದು ಹೇಳುವುದಾದರೆ ಉಳುವವನಿಗೆ ಭೂಮಿಯನ್ನು ಕೊಡಿಸುವ ಒಂದು ಕಾರ್ಯಕ್ರಮವನ್ನು ಈ ಕರ್ನಾಟಕ ರಾಜ್ಯದಲ್ಲಿ ಅತ್ಯಂತ ಯಶಸ್ವಿಯಾಗಿ ಮಾಡಿದ್ದಾರೆ. ಆ ಪ್ರಕಾರ ಸುಮಾರು 8 ಲಕ್ಷ ಗೇಣಿದಾರರಿಗೆ 40 ಲಕ್ಷ ಎಕರೆಗಳಷ್ಟು ಜಮೀನಿಗೆ ಸಂಬಂಧಪಟ್ಟಹಾಗೆ ಅನೇಕ ವ್ಯವಹಾರಗಳನ್ನು ಈಗಾಗಲೇ ಭೂ ನ್ಯಾಯ ಮಂಡಲಿಯವರು ತೀರ್ಮಾನ ಮಾಡಿಕೊಟ್ಟಿದ್ದಾರೆಂದು ಸರ್ಕಾರ ಹೇಳುತ್ತಿದ್ದರೂ ಜನಸಾಮಾನ್ಯರಿಗೆ ಇದರ ಬಗ್ಗೆ ಸಾಕಷ್ಟು ತಿಳುವಳಿಕೆ ಇಲ್ಲದಿರುವುದರಿಂದ, ಗೇಣಿದಾರನು ಇದರ ಬಗ್ಗೆ ಅರ್ಜಿ ಹಾಕಿಕೊಳ್ಳಲು ಇರತಕ್ಕ ಕಾಲಾವಧಿಯನ್ನು ಇನ್ನೂ 6 ತಿಂಗಳವರೆಗೆ ಮುಂದುವರಿಸಿದ್ದೇವೆಂದು ಹೇಳಿದರು. ನನ್ನ ಅಭಿಪ್ರಾಯದ ಪ್ರಕಾರ ಸರ್ಕಾರ ಈ ಒಂದು ದಿಸೆಯಲ್ಲಿ ಸ್ವಲ್ಪ ಮಟ್ಟಿಗೆ ಮುಗ್ಗರಿಸಿದೆ ಎಂಬುದಾಗಿ ಹೇಳಿದರೆ ಅದೇನೂ ತಪ್ಪಾಗಲಾರದು. ಸಾಮಾನ್ಯವಾಗಿ ಜಮೀನಿನ ಮೇಲೆ ಪ್ರೇಮ ಇಷ್ಟವುಳ್ಳವಂತಹವರು ಅದರಲ್ಲಿಯೂ ಜಮೀನನ್ನು ಮಾಡುತಾ-ಇರತಕ್ಕ ಗೇಣಿದಾರ ಇಂತಹ ಒಂದು ಕಾನೂನು ಬಂದ ತಕ್ಷಣ ಯಾವ್ಯಾವ ಭೂಮಿಯನ್ನು ತಾನು

ಪಡೆದುಕೊಳ್ಳಬೇಕೆಂಬ ಆಸಕ್ತಿ, ಆಶೆ ಅವನಿಗೆ ಹುಟ್ಟುತ್ತದೆ. 100ರಲ್ಲಿ ಒಬ್ಬರು ಅಥವಾ ಇಬ್ಬರು ಇವರ ಬಗ್ಗೆ ತಿಳುವಳಿಕೆ ಇಲ್ಲದೆ ಇರತಕ್ಕಂಥವರು ಇರಬಹುದು. ಆದರೆ ಈ ರೀತಿ ಕಾಲಾವಧಿಯನ್ನು ಹೆಚ್ಚಿಸಿದ ಮೇಲೆ ಬಹುಶಃ ಸಾವಿರಾರು ಅರ್ಜಿಗಳು ಬಂದಿರಬಹುದು, ಅವುಗಳಲ್ಲಿ ಇದಕ್ಕೆ ಸಂಬಂಧ ಪಡದೇ ಇರತಕ್ಕಂಥ ಕೆಲವು ಅರ್ಜಿಗಳು ಬಂದಿರುವುದನ್ನೂ ಸಹ ನಾವು ನೋಡುತ್ತಿದ್ದೇವೆ. ಕೆಲವು ದ್ವೇಷಾಸೂಯೆಗೆ ಸಂಬಂಧಪಟ್ಟವು ಇರಬಹುದು. ಸರ್ಕಾರ ಕೈಗೊಂಡಿರತಕ್ಕಂಥ ಕಾರ್ಯಕ್ರಮ ಗಳಲ್ಲಿ ಈ ಸರ್ಕಾರದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸುವುದೇನೆಂದರೆ ಒಂದೇ ಕಂತಿನಲ್ಲಿ ಅಬಲೆಯರಿಗೆ, ಅಂಗವಿಕಲರಿಗೆ ಪರಿಹಾರ ಹಣವನ್ನು ಕೊಡಬೇಕೆಂದು ಮಾಡಿರುವುದು ಶ್ಲಾಘನೀಯ. ಕೇವಲ ಅಷ್ಟು ಕೊಟ್ಟರೆ ಏನೇನು ಸಾಲದು; ಸಾಧಾರಣವಾಗಿ ಒಂದು ಎಕರೆ, ಎರಡು ಎಕರೆ ಇರುವಂಥ ಜಮೀನು ದಾರರಿಗೆ 20 ಕಂತುಗಳಲ್ಲಿ ಹಣ ಕೊಡುತ್ತಾ ಹೋದರೆ ಅವರು ಮುಂದೆ ತಮ್ಮ ಜೀವನವನ್ನು ಅವರಿಗೆ ಸಿಕ್ಕುವ ಅಲ್ಪ ಹಣದಲ್ಲಿ ಯಾವ ರೀತಿ ಸಾಗಿಸಿಕೊಂಡು ಹೋಗಬೇಕು? ಅನೇಕ ಬಾಬುಗಳಿಗೆ ಒದಗಿಸಿದ್ದ ಹಣ ಖರ್ಚು ಮಾಡದೆ ಉಳಿದಿರತಕ್ಕಂಥ ಹಣದಿಂದಲಾದರೂ ಅವರಿಗೆ ಪರಿಹಾರ ಕೊಡಿ ಎಂದು ಮಾನ್ಯ ಶ್ರೀ ಕಾಗೋಡು ತಿಮ್ಮಪ್ಪನವರೂ ಹಾಗೂ ವಿರೋಧ ಪಕ್ಷದ ನಾಯಕರಾದ ಶ್ರೀ ಎಚ್. ಡಿ. ದೇವೇಗೌಡರವರು ಹೇಳುತ್ತಿದ್ದರು.

ಮಾನ್ಯ ಕಾಗೋಡು ತಿಮ್ಮಪ್ಪನವರು ನಮ್ಮ ಸರ್ಕಾರದವರು ಜನರ ಹಿತವನ್ನು ಕಾಪಾಡ ಬೇಕಾದರೆ ಈಗ ಏನು ಭೂಮಿಯನ್ನು ಭೂಮಾಲಿಕರಿಂದ ಪಡೆದಿದ್ದಾರೆ, ಅವರಿಗೆ ಪರಿಹಾರವನ್ನು ಸರಿಯಾದ ರೀತಿಯಲ್ಲಿ ಹಾಗೂ ಬೇಗನೆ ಕೊಡುತ್ತಿಲ್ಲವೆಂದು ಹೇಳಿದರು. ಆದಕ್ಕೆ ನಾನು ಅವರಿಗೆ ಕೇಳುತ್ತೇನೆ ಶ್ರೀಮಾನ್ ಮೊರಾರ್ಜಿ ದೇಸಾಯಿಯವರೂ ಕೂಡ ಭೂಮಾಲೀಕರಿಗೆ ಪರಿಹಾರ ಕೊಡುವ ವಿಷಯದಲ್ಲಿ ಅವರಿಗೂ ಕೂಡ ಆಸಕ್ತಿಯಿದೆಯಾದ್ದರಿಂದ ಅವರು ಸಹ ಕೇಂದ್ರ ಸರ್ಕಾರದ ವತಿಯಿಂದ ನಮಗೆ ಏತಕ್ಕೆ ಸಹಾಯ ಮಾಡಬಾರದೆಂದು ಕೇಳುತ್ತೇನೆ ನಿಮಗೆ ಗೊತ್ತಿದೆ ಸರ್ಕಾರದ ಅಭಿಪ್ರಾಯ. ಸರ್ಕಾರದ ಹಣವನ್ನು ಪರಿಹಾರಕ್ಕೆ ಕೊಟ್ಟರೆ ಅಭಿವೃದ್ಧಿ ಕಾರ್ಯಗಳು ಮತ್ತು ಬರಗಾಲ ಸಮಯದಲ್ಲಿ ಈ ಕೆಲಸಕಾರ್ಯಗಳು ಕುಂಠಿತವಾಗಬಾರದು. ಇದರಲ್ಲಿ ತಮ್ಮ ಸರ್ಕಾರದ ಜವಾಬ್ದಾರಿಯೂ ಇದೆ. ಅದರಲ್ಲಿಯೂ ಕೇಂದ್ರ ಸರ್ಕಾರದ ಮೇಲೆ ಹೆಚ್ಚಿನ ಜವಾಬ್ದಾರಿ ತೆಗೆದುಕೊಳ್ಳಲಿ ಎಂದು ಹೇಳುತ್ತೇನೆ. ಈಗ ಏನು ಗೇಣಿದಾರರಿಗೆ ಜಮೀನು ಕೊಡುತ್ತಿದ್ದಾರೆ ಅದು ಶಾಶ್ವತವಾಗಿ ಅವನ ವಂಶಪಾರಂಪರ್ಯವಾಗಿ ಹಕ್ಕನ್ನು ಆ ರೈತನಿಗೇ ಕೊಡಿಸಿಕೊಡಬೇಕು. ಯಾರೋ ಕೆಲವರು ವಿಧವೆಯರು ಮತ್ತು ಅಂಗವಿಕಲರ ಜಮೀನನ್ನು ತೆಗೆದುಕೊಂಡಿರುವುದರಿಂದ ಅವರಿಗೆ ಕೂಡಲೇ ಒಂದೇ ಕಂತಿನಲ್ಲಿ ಕೊಡಬೇಕು. ಜೊತೆಗೆ ಆ ಜಮೀನುಗಳನ್ನು ಯಾರೋ ಶ್ರೀಮಂತರಿಗೆ ಸ್ವಂತಕ್ಕಾಗಿ ಪರಿವರ್ತನೆಮಾಡಿ ಲಕ್ಷಾಂತರ ರೂಪಾಯಿ ಸಂಪಾದನೆ ಮಾಡುತ್ತಿದ್ದಾರೆ. ಇದಕ್ಕೆ ದಯಮಾಡಿ ಅವಕಾಶ ಕೊಡಬೇಡಿ ಎಂದು ಕಳಕಳಿಯಿಂದ ಪ್ರಾರ್ಥನೆ ಮಾಡುತ್ತೇನೆ. ಇಲ್ಲದೆ ಹೋದರೆ ಮೂಲ ಉದ್ದೇಶಕ್ಕೆ ಧಕ್ಕೆ ಉಂಟಾಗುತ್ತದೆ. ಪ್ರತಿಯೊಬ್ಬ ಬಡವನಿಗೆ ಕೊಡುವ ಜಮೀನು ಅವನ ವಂಶಪಾರಂಪರ್ಯವಾಗಿ ಸಿಕ್ಕುವಂತೆ ಅವಕಾಶವನ್ನು ತಿದ್ದುಪಡಿಯಲ್ಲಿ ಮಾಡಿದರೆ ಒಳ್ಳೆಯದು. ಅನೇಕ ಕಡೆ ಜಮೀನುಗಳನ್ನು ತೆಗೆದುಕೊಂಡು ಅವರಿಗೆ ಹಣವನ್ನು ಕೊಡದೆ ಇರುವುದು ಜೊತೆಗೆ ಅವರ ಮೇಲೆ ಕಂದಾಯ ವಸೂಲಿಮಾಡುವ ಪ್ರಕಾರ ಮಾಡಿದ್ದಾರೆ ಇನ್ನು ತೆಂಗಿನ ತೋಟ ಮತ್ತು ಗದ್ದೆಗಳಿಗೆ ಬಹಳ ಕಡಿಮೆ ದರದಲ್ಲಿ ಪರಿಹಾರವನ್ನು ಕೊಡಬೇಕೆಂದು ಮಾಡಿರುವುದು ಸರಿಯಲ್ಲ. ಮಾನ್ಯ ರೆವಿನ್ಯೂ ಸಚಿವರಿಗೆ ಗೊತ್ತಿದೆ ಎಕರೆ ಒಂದಕ್ಕೆ ಒಂದೂವರೆ ಸಾವಿರ ಅಥವಾ ಎರಡು ಸಾವಿರ ರೂಪಾಯಿ ಕೊಟ್ಟರೆ ಅವರಿಗೆ ಬಹಳ ಅನ್ಯಾಯವಾಗುತ್ತದೆಂದು. ಮುಖ್ಯವಾಗಿ ವಿಧವೆಯರಿಗೆ ಹಾಗೂ ಅಂಗವಿಕಲರಿಗೆ ಪರಿಹಾರ ಕೊಡುವಾಗ ಸ್ವಲ್ಪ ಹೆಚ್ಚಿನ ದರವನ್ನು ಗೊತ್ತುಮಾಡಿ ಅವರಿಗೆ ಸಹಾಯಮಾಡಬೇಕು ಈ ಇಬ್ಬರನ್ನು ಸಂರಕ್ಷಣೆ ಮಾಡುವುದು ಸರ್ಕಾರದ ಕರ್ತವ್ಯ. ಇನ್ನು ಲ್ಯಾಂಡ್ ಟ್ರಿಬ್ಯೂನಲ್‌ನಲ್ಲಿ ನಾನೂ ಒಬ್ಬ ಸದಸ್ಯ. ಅದರಲ್ಲಿ ಏನಾಗಿದೆಯೆಂದರೆ ಭೂಮಾಲೀಕ ತಮ್ಮ ಭೂಮಿಗಳನ್ನು ಮಾರಾಟಮಾಡಿ ಅವನೇ ಪುನಃ ಟ್ರಿಬ್ಯೂ ನಲ್‌ಗೆ ಅರ್ಜಿ ಹಾಕಿರುತ್ತಾನೆ. ಅವನು ಹೇಳುತ್ತಾನೆ ನಾನು ನಾಮಕೆ ಖರೀದಿ ಮಾಡಿದ್ದೇ ಅಷ್ಟೇ ನಾನು ನಿಜವಾಗಿಯೂ ಪೂರ್ತಿಯಾಗಿ ಖರೀದಿ ಮಾಡಿರಲಿಲ್ಲವೆಂದು ಹೇಳುತ್ತಾನೆ. ಇದು ಒಂದು ಮೂಲಭೂತವಾದ ಸಮಸ್ಯೆ. ಆದ್ದರಿಂದ ಇದರ ಬಗ್ಗೆ ಬಹಳ ಜಾಗ್ರತೆಯಿಂದ ಕಾನೂನನ್ನು ಅನೇಕ

ವಿಧವಾಗಿ ಮಾರ್ಪಾಡುಮಾಡಿ ಸಾಧ್ಯವಾದಷ್ಟು ಮಟ್ಟಿಗೆ ಅವನಿಗೆ ಹಣವನ್ನು ಕೊಡಿಸಿ ಋಣಪರಿಹಾರ ಮಾಡುವುದಕ್ಕೆ ಸಹಾಯ ಮಾಡಬೇಕೆಂದು ಹೇಳಿ ಮಾನ್ಯ ರೆವಿನ್ಯೂ ಸಚಿವರು ತಂದಿರತಕ್ಕಂಥ ತಿದ್ದುಪಡಿಯನ್ನು ಶ್ಲಾಘಿಸಿ ನನ್ನ ಪೂರ್ಣವಾದ ಅನುಮತಿಯನ್ನು ವ್ಯಕ್ತಪಡಿಸುತ್ತೇನೆ.

† ಶ್ರೀ ಎಚ್. ಬಿ. ಕೆಂಚೇಗೌಡ (ಕೃಷ್ಣರಾಜಸಾಗರ).—ಮಾನ್ಯ ಅಧ್ಯಕ್ಷರೇ, 53ನೇ ಅಮೆಂಡ್‌ಮೆಂಟ್ ಬಗ್ಗೆ 20 ಇನ್‌ಸ್ಟಾಲ್‌ಮೆಂಟ್ ನಾಲ್ಕುವರೆಯಿಂದ ಐದುವರೆ ಪರ್ಸೆಂಟ್ ಬಡ್ಡಿದರದಮೇಲೆ ಟೆನೆಂಟ್ಸ್‌ಗಳು ಸರ್ಕಾರಕ್ಕೆ ದುಡ್ಡು ಕೊಡಬೇಕಾಗುತ್ತದೆ. ಪಿಎಲ್‌ಡಿ ಬ್ಯಾಂಕ್‌ನಿಂದ ಸಾಲ ಕೊಡಿಸಿ ಅದನ್ನು ಸರ್ಕಾರದವರು ಏತಕ್ಕೆ ತೆಗೆದುಕೊಳ್ಳಬೇಕು; ನೇರವಾಗಿ ಸರ್ಕಾರದವರೇ ಏತಕ್ಕೆ ವ್ಯವಸ್ಥೆಮಾಡಬಾರದು ಎಂದು ಕೇಳುತ್ತೇನೆ. ಭೂಮಾಲೀಕರ ಸಾಲವನ್ನು ಉದಾಹರಣೆಗೆ ಹೇಳಬೇಕೆಂದರೆ ಸುಮಾರು ನಮ್ಮ ತಾಲ್ಲೋಕಿಗೆ 17ಲಕ್ಷ ರೂಪಾಯಿ ಪಿಎಲ್‌ಡಿ ಬ್ಯಾಂಕ್‌ನವರು ಸಾಲ ಕೊಟ್ಟಿದ್ದಾರೆ. ಅದರಲ್ಲಿ ಕೇವಲ 35 ಸಾವಿರ ರೂಪಾಯಿ ಮಾತ್ರ ಜನರಿಗೆ ಸಿಕ್ಕಿದೆ. ಇದರಿಂದ ಟೆನೆಂಟ್‌ಗಳಿಗೆ ತೊಂದರೆಯಾಗುತ್ತದೆ. ಜೊತೆಗೆ ಸಾಲದ ಹಣವನ್ನು ಅವರು ಕಟ್ಟದೆ ಹೋದರೆ ಜಪ್ತಿಮಾಡಿ ವಸೂಲುಮಾಡುತ್ತಾರೆ. ಇವರಿಗೆ ಪಿಎಲ್‌ಡಿ ಬ್ಯಾಂಕಿನಿಂದ ಸಾಲ ದೊರೆಯುವುದಿಲ್ಲ. ಪಿಎಲ್‌ಡಿ ಯವರು 11 ಪರ್ಸೆಂಟ್ ಬಡ್ಡಿ ಚಾರ್ಜ್ ಮಾಡುತ್ತಾರೆ. ಆದ್ದರಿಂದ ಈ ಆತಂಕವನ್ನು ಹೋಗುವಂತೆ ಮಾಡಬೇಕು. ಅವರಿಂದ ಹೆಚ್ಚಿಗೆ ಬಡ್ಡಿ ವಸೂಲು ಮಾಡುವಂತೆ ಆಗಬಾರದು. ಇನ್ನು ವಿಧವೆಯರು ಮತ್ತು ಅಂಗವಿಕಲರ ಜಮೀನುಗಳನ್ನು ಏನು ತೆಗೆದುಕೊಂಡಿದ್ದೀರಿ ಅವರಿಗೆ ಕಂತಿನಮೇಲೆ 2 ಸಾವಿರ ರೂಪಾಯಿ ಕೊಡುವುದು ಸರಿಯಲ್ಲ. ಅವರಿಗೆ ಲಂಪ್‌ಸಮ್ ಹಣವನ್ನು ಕೊಡಬೇಕೆಂದು ಹೇಳಬಯಸುತ್ತೇನೆ. ಇನ್ನು ಅಭಾವ ಪೀಡಿತ ಪ್ರದೇಶಗಳಲ್ಲಿ ರೆವಿನ್ಯೂ ಕಲೆಕ್ಷನ್ ಏನು ಅವನ್ನು ಸ್ವಲ್ಪಮಟ್ಟಿಗೆ ಸರಿಪಡಿಸಬೇಕು. ಇದನ್ನು ಕಂದಾಯ ಮಂತ್ರಿಗಳ ಗಮನಕ್ಕೆ ತಂದು ಅಧ್ಯಕ್ಷರಿಗೆ ನನ್ನ ವಂದನೆಗಳನ್ನು ತಿಳಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷರೇ, ಮಾನ್ಯ ಕಂದಾಯ ಸಚಿವರು ತಂದಿರತಕ್ಕ ಭೂಸುಧಾರಣೆ ತಿದ್ದುಪಡಿ ಬಗ್ಗೆ ಎರಡು ಮಾತನ್ನು ಹೇಳಲಿಕ್ಕೆ ಅಪೇಕ್ಷೆಪಡುತ್ತೇನೆ. ಏನು ಅವಧಿ ವಿಸ್ತರಣೆ ಮಾಡುತ್ತಿದ್ದಾರೆ ಅದನ್ನು ಇನ್ನು ಮುಂದೆ ಹಾಗೆ ಮಾಡಬಾರದು. ವಿಸ್ತರಣೆ ಮಾಡುತ್ತಿರುವುದರಿಂದ ಇಲ್ಲಸಲ್ಲದ ಅರ್ಜಿಗಳನ್ನು ಹಾಕಲಿಕ್ಕೆ ಅವಕಾಶ ಮಾಡಿದಂತಾಗುತ್ತದೆ. ಇನ್ನು ಸ್ವಲ್ಪ ಕಾಲಾವಕಾಶ ಕೊಟ್ಟರೆ ಮತ್ತಷ್ಟು ಅರ್ಜಿಗಳನ್ನು ಹಾಕುತ್ತಾರೆಂದು ನನ್ನ ಭಾವನೆ. ನನ್ನ ಸ್ನೇಹಿತರಾದ ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಹೇಳಿದ್ದಾರೆ ಅದರಂತೆ ರೈತ ಒಂದು ಭಾವಿ ತೆಗೆಯಲು 1000 ರೂಪಾಯಿ ಸಾಲ ತೆಗೆದುಕೊಂಡರೆ ತೀರಿಸುವ ಕಾಲಕ್ಕೆ ಅದು 2,250 ರೂಪಾಯಿ ಆಗುತ್ತದೆ. ಗೇಣಿದಾರನಿಗೆ ಇದರಿಂದ ಅನುಕೂಲ ಮಾಡಿದ್ದೀರಾ ? ಅದನ್ನು ಯೋಚನೆ ಮಾಡಬೇಕು ಇನ್ನು ವಿಧವೆಯರಿಗೆ ಮತ್ತು ಅಂಗವಿಕಲರಿಗೆ 5–6 ಎಕರೆ ಭೂಮಿಗಿಂತ ಕಡಿಮೆ ಇದ್ದರೆ ಅದನ್ನು ತಾವು ಪೂರ್ತಿ ತೆಗೆದುಕೊಂಡಿದ್ದರೆ ಪೂರ್ತ ಹಣವನ್ನು ಕೊಡಬೇಕು ತಾವು ಆ ರೀತಿ ಮಾಡುತ್ತಿಲ್ಲ ಮಾರ್ವಾಡಿ ವ್ಯಾಪಾರ ಮಾಡುವುದಕ್ಕೆ ಹೊರಟ್ಟಿದ್ದೀರಿ ? ಭೂಮಾಲೀಕರಿಗೆ ಹಣವನ್ನು ಒಂದೇ ಕಂತಿನಲ್ಲಿ ಕೊಡದೆ ಅವರ ಜಮೀನನ್ನು ಕಿತ್ತುಕೊಂಡು ಜಮಾ ಮಾಡಿಕೊಳ್ಳುವುದು ಅದನ್ನು ಸಂಪೂರ್ಣವಾಗಿ ತಪ್ಪಿಸಿ ಒಂದೇ ಸಾರಿ ಪೂರ್ತ ಹಣವನ್ನು ಒಂದೇ ಕಂತಿನಲ್ಲಿ ಕೊಡಬೇಕೆಂದು ಹೇಳುತ್ತೇನೆ. ನಮ್ಮ ಸ್ನೇಹಿತರು ಹೇಳಿದಂತೆ ಸಾವುಕಾರರ ಗೇಣಿದಾರರು ಹೋಗಿ ಸರ್ಕಾರಿ ಗೇಣೀದಾರರಾಗಿದ್ದಾರೆ. ಅವರು ಸರ್ಟಿಫಿಕೇಟ್ ಕೊಡಬೇಕು. ಮಾನ್ಯ ಸಚಿವರು ಹೇಳುತ್ತಾರೆ ಎಲ್ಲಿಯೂ ವಸೂಲಿ ಮಾಡುತ್ತಿಲ್ಲವೆಂದು. ಆದರೆ ನಮ್ಮ ಭಾಗದಲ್ಲಿ ಎಲ್ಲರಿಗೂ ನೋಟೀಸು ಕೊಟ್ಟಿದ್ದಾರೆ ತಕ್ಷಣ ಸರ್ಕಾರಿ ಗೇಣಿದಾರರಿಗೆ ಸ್ಪಷ್ಟವಾಗಿ ಹೇಳುತ್ತೇನೆ ಮೂರು ಕಾಸು ಗೇಣಿ ಪಾವತಿ ಮಾಡುವುದಿಲ್ಲ 5 ಎಕರೆಗೆ ಕಡಿಮೆ ಇದ್ದರೆ ಅವರಿಗೆ ಏತಕ್ಕೆ ತೊಂದರೆ ಕೊಡುತ್ತೀರಿ ? ಇದನ್ನೆಲ್ಲಾ ಸರ್ಕಾರದವರು ಗಮನಕ್ಕೆ ತೆಗೆದುಕೊಳ್ಳಬೇಕು. ಇನ್ನು ಒಂದು ಮಾತನ್ನು ಹೇಳುವುದಾದರೆ 35ಕೋಟಿ ರೂಪಾಯಿ ಅಥವಾ 40ಕೋಟಿ ರೂಪಾಯಿ ಆಗಬಹುದು ಆದರೂ ಚಿಂತೆಯಿಲ್ಲ ಸರ್ಕಾರದವರೇ ವಹಿಸಿಕೊಂಡು ಇದನ್ನು ಬಗೆಹರಿಸಬೇಕು. ಎಲ್ಲಾ ಅಪವ್ಯಯಗಳನ್ನು ನಿಲ್ಲಿಸಿದರೆ ಸರ್ಕಾರವೇ ನೇರವಾಗಿ ಗೇಣಿದಾರನ ಸಾಲವನ್ನು ಭರಿಸಬಹುದು.

ಬಹಳ ಮುಖ್ಯವಾಗಿ ಇನ್ನೊಂದು ಅಂಶವನ್ನು ಹೇಳಬೇಕಾಗಿದೆ. ಈ ಟ್ರಿಬ್ಯೂನಲ್‌ಗಳ ಬಗ್ಗೆ ಹೇಳುವುದಾದರೆ ಇವತ್ತು ನಮ್ಮ ರಾಜ್ಯದ ಅನೇಕ ಭಾಗಗಳಲ್ಲಿ ಟ್ರಿಬ್ಯೂನಲ್‌ಗಳಿಂದ ಅನ್ಯಾಯವಾಗಿದೆ ಪ್ರಾಮುಖ್ಯವಾಗಿ ಗೇಣಿದಾರರಿಗೆ ಅನ್ಯಾಯವಾಗಿದೆ ಮತ್ತು ಬೇರೆಯವರಿಗೂ ಅನ್ಯಾಯವಾಗತಕ್ಕಂಥ ಘಟನೆಗಳು ಇವೆ. ಆದರೆ ಇವತ್ತು ಅವರಿಗೆ ಯಾವ ರೀತಿಯ ಪರಿಹಾರವೇ ಇಲ್ಲ ಅದಕ್ಕೆ ಸರ್ಕಾರದವರು ಹೇಳುತ್ತಾರೆ ಲೀಗಲ್ ಏಡ್ ಮಾಡಿದ್ದೇವೆ ಸರ್ಕಾರದ ಮೂಲಕ ಹೈಕೋರ್ಟಿಗೆ ಹೋಗುವುದಕ್ಕೆ ವ್ಯವಸ್ಥೆ ಮಾಡಿ, ಅದನ್ನು ಇತ್ಯರ್ಥ ಮಾಡುತ್ತೇವೆ ಎಂದು ಏನೋ ಹೇಳುತ್ತಾರೆ. ಈ ಲೀಗಲ್ ಏಡ್ ಕಂಪನಿ ಏನಿದೆ ಆ ಕಂಪನಿಯನ್ನು ತಾವು ನೋಡಬೇಕು ಅದರಲ್ಲಿ ಎಂಥೆಂಥವರು ಇದ್ದಾರೆ ಎಂಥೆಂಥವರನ್ನು ನೇಮಕ ಮಾಡಿದ್ದಾರೆ. ಅವರಲ್ಲಿ ನಮಗೆ ಸೂಜಿಮೊನೆಯಷ್ಟೂ ವಿಶ್ವಾಸವಿಲ್ಲ ಆದುದರಿಂದ ಈ ಟ್ರಿಬ್ಯೂನಲ್‌ಗಳಲ್ಲಿ ಏನು ಅನ್ಯಾಯಗಳು ಇದ್ದಾವೆ ಅವುಗಳನ್ನು ಸರಿಪಡಿಸುವುದಕ್ಕೆ ಒಂದು ಹೊಸ ವ್ಯವಸ್ಥೆ ಮಾಡಬೇಕು. ಜಿಲ್ಲಾ ಮಟ್ಟದಲ್ಲಿ ಅಥವಾ ಡಿವಿಜನ್ ಮಟ್ಟದಲ್ಲಿ ಆಗಲೀ ರಾಜ್ಯ ಮಟ್ಟದಲ್ಲಿ ಆಗಲೀ ಒಂದು ನ್ಯಾಯ ಮಂಡಲಿಯನ್ನು ನೇಮಕ ಮಾಡಿ. ಅದರ ಮುಖಾಂತರ ಪುನರ್ ಪರಿಶೀಲನೆ ಮಾಡಿ ಗೇಣಿದಾರರಿಗೆ ಅಥವಾ ಬೇರೆ ಯಾರಿಗೇ ಆಗಲೀ ಅನ್ಯಾಯವಾಗಿದ್ದರೆ ನ್ಯಾಯವನ್ನು ಒದಗಿಸತಕ್ಕಂಥ ವ್ಯವಸ್ಥೆ ಮಾಡದೇ ಹೋದರೆ ಬಹಳ ಜನರಿಗೆ ತೊಂದರೆಯಾಗುತ್ತದೆ. ಮಾನ್ಯ ಅಧ್ಯಕ್ಷರೇ, ಅನೇಕ ಕಡೆ ಅಷ್ಟು ಶಕ್ತಿವಂತರು ಅಲ್ಲದೇ ಇರತಕ್ಕಂಥವರು ಸಣ್ಣಪುಟ್ಟ ಭೂಮಾಲೀಕರು ಯಾರಿದ್ದಾರೆ ಅವರ ಮೇಲೆ ಯಾವ ಪಕ್ಷಕ್ಕೂ ಸೇರದವರು ಎನ್ನುವ ಬಣ್ಣವನ್ನು ಹಚ್ಚಿ ಹೊಟ್ಟೆ ಕಿಚ್ಚಿನಿಂದ ಅರ್ಜಿ ಹಾಕಿಸಿ ಅವರನ್ನು ನಿರ್ಗತಿಕರನ್ನಾಗಿ ಮಾಡಿದ್ದಾರೆ. ನನ್ನ ಸ್ನೇಹಿತರಾದ ಶ್ರೀಮಾನ್ ಶ್ರೀರಾಮ್ಮಳಿ ಚಂದ್ರಶೇಖರ್‌ರವರು ಹೇಳುತ್ತಾರೆ ನಾವು ಕತ್ತೆಗಳೆಂದು, ಅವರು ಕತ್ತೆಯ ಹಿಂದೆ ನಿಂತಿದ್ದಾರೆ. ಕತ್ತೆ ಹಿಂದೆ ನಿಂತರೆ ಏನಾಗುತ್ತದೆ ಎನ್ನುವುದು ಎಲ್ಲರಿಗೂ ಗೊತ್ತಿರುವ ವಿಚಾರ, ಇವತ್ತು ಅವರು ಹುಲಿ ವೇಷದ ಕತ್ತೆಗಳಾಗಿದ್ದಾರೆ. ಅಷ್ಟೇ ಅಲ್ಲ ಕಾಂಗ್ರೆಸ್ ಪಕ್ಷ ಗೋಮುಖ ವ್ಯಾಘ್ರ ಎನ್ನುವುದು ಅರ್ಥವಾಗುತ್ತಿದೆ, ಇಷ್ಟು ಮಾತ್ರ ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Matter under Rule 312

re: Statement of the Chief Justice

SRI D. DEVARAJ URS.—Madam Speaker, I was asked whether I had sent a reply to the latest letter of the Chief Justice of Karnataka, I have just now sent a reply. the copy of which, I would like to place it before the House.

D. DEVARAJ URS,
Chief Minister

DO.NO. CMI 603/77
Vidhana Soudha, Bangalore,
Dated April 23, 1977

My dear Chief Justice,

Please refer to your DO letter No. CJ/CM. 11/77 dated the 22nd April 1977.

2. I only wish that you had seen the full Proceedings on the floor of both the Legislative assembly and the Legislative Council. If you had gone through them in full, you would certainly have come to a different conclusion, and that I have neither wronged you nor let you down.